# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026





Good Opportunity for Branding
1,25,000+
Digital E-PAPER READERS
No.1 HAMPI TIMES LEADING PRINT & DIGITAL District News Paper
Call Us for Advertisements: 9448633038



ಸಂಪುಟ:02 • ಸಂಚಿಕೆ: 258 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 19.04.2025 • ಶನಿವಾರ • ಪುಟ:04 • ಬೆಲೆ:2
Volume:02 • Issue: 258 • PRGI No:KARKAN/2023/88055 • VIJAYANAGARA • 19.04.2025 • Saturday • Page:04 • Rs:2


## ನಿನಗೆ ನೀನೇ ಬೆಳಕು

ಅನೇಕ ದಾರಿಗಳಲ್ಲಿ ಬೆಳಕು
ಹುಡುಕುವ ಮುಂಚೆ,
ಒಮ್ಮೆ ನಿನ್ನೊಳಗಿನ ದೀಪ ಹಚ್ಚು

## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ

ಶಾಲಾ ದಾಖಲಾತಿಗೆ
ಹೊಂದಿಕೊಳ್ಳುವಂತೆ ಹೆರಿಗೆ




# ಪರಂಪರೆಯೇ ನಮ್ಮ ಸಂಸ್ಕೃತಿಯ ಜೀವಾಳ

## ಪರಂಪರೆ ಇಲಾಖೆಯ ನಿರ್ದೇಶಕ ಡಾ. ಆರ್. ಶೇಜೇಶ್ವರ ಹೇಳಿಕೆ | ಹಂಪಿಯಲ್ಲಿ ವಿಶ್ವ ಪರಂಪರೆ ದಿನಾಚರಣೆ 2025

## ಪೂರ್ವಜರನ್ನ ನೆನೆಯುವುದರ ಜೊತೆ ಗೌರವಿಸುವುದು, ಮುಂದಿನ ಪೀಳಿಗೆಗೆ ಉಳಿಸಿ ಹರಡುವುದೇ ಪರಂಪರೆ

**ಹಂಪಿ ಟೈಮ್ಸ್ ಹೊಸಪೇಟೆ**

ಪರಂಪರೆಯೆಂದರೆ ಕೇವಲ ಸ್ಮಾರಕಗಳು ಮತ್ತು ನೆನಪುಗಳು ಮಾತ್ರವಲ್ಲ, ಅದು ನಮ್ಮ ಸಂಸ್ಕೃತಿಯ ಜೀವಾಳ. ಪರಂಪರೆ ಸಂರಕ್ಷಿಸುವುದು ಎಂದರೆ ನಮ್ಮ ಪೂರ್ವಜರನ್ನ ಗೌರವಿಸುವುದು ಜೊತೆಗೆ ಮುಂದಿನ ಪೀಳಿಗೆಗಳಿಗೆ ಪ್ರೇರಣೆಯ ಬೆಳಕು ಹರಡುವುದಾಗಿದೆ ಎಂದು ಕಮಲಾಪುರ–ಹಂಪಿಯ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ನಿರ್ದೇಶಕ ಡಾ. ಆರ್. ಶೇಜೇಶ್ವರ ಹೇಳಿದರು.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ–ಹಂಪಿ, ಇನ್ಸಿಟ್ಯೂಷನ್ ಆಫ್ ಇಂಜಿನೀಯರ್ಸ್ (ಇಂಡಿಯಾ), ಸ್ಥಳೀಯ ಕೇಂದ್ರ, ಮುನಿರಾಬಾದ್ ಹಾಗೂ ಹಂಪಿ ವಿರುಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲಯ, ವಿದ್ಯಾರಣ್ಯ, ಕಮಲಾಪುರ ಇವರ ಸಹಯೋಗದಲ್ಲಿ ಶುಕ್ರವಾರ ಹಂಪಿಯ ಉತ್ಖನನ ನೆಲೆ ಮತ್ತು ವೀರಭದ್ರ ದೇವಾಲಯದಲ್ಲಿ ಆಯೋಜಿಸಲಾಗಿದ್ದ ವಿಶ್ವ ಪರಂಪರೆ ದಿನಾಚರಣೆ 2025 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪರಂಪರೆಯ ರಕ್ಷಣೆ ಅತ್ಯಗತ್ಯ; ರಕ್ಷಣೆ ಎಂದರೆ ಕೇವಲ ಇತಿಹಾಸವನ್ನು ಉಳಿಸಿಕೊಳ್ಳುವುದು ಮಾತವಲ್ಲ, ಅದು ನಮ್ಮ ಒಳಗಿನ ಸಂಸ್ಕೃತಿಯ ಅರಿವನ್ನು ಜೀವಂತವಾಗಿಡುವ ಹಾಗೂ ಸಮಾಜದ ಸಾಂಸ್ಕೃತಿಕ ಬುನಾದಿಯನ್ನು ಬಲಪಡಿಸುವ ಒಂದು ಜವಾಬ್ದಾರಿಯಾಗಿದೆ. ನಮ್ಮ ಪರಂಪರೆಯ ಆಚರಣೆಗಳಲ್ಲಿ ವೈಜ್ಞಾನಿಕತೆಯ ಅಂಶಗಳು ಅಡಗಿವೆ ಎಂದು ಉದಾಹರಣೆಗಳೊಂದಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಕಮಲಾಪುರ–ಹಂಪಿ ಪುರಾತತ್ವ ಸಹಾಯಕ ಡಾ. ಆರ್. ಮಂಜನಾಯ್ಕ ಅವರು ಪರಂಪರೆಯ ಸಂರಕ್ಷಣೆಯ ಕುರಿತು ವಿಶೇಷ ಉಪನ್ಯಾಸ ನೀಡುತ್ತಾ, ಹಂಪಿಯ ಪ್ರಾಗೈತಿಹಾಸಿಕ ಕಾಲದ ಬಗ್ಗೆ ಬೆಳಕು ಚೆಲ್ಲಿದರು. ವಿಜಯನಗರ ಕಾಲದ ಐತಿಹಾಸಿಕ ಆಚರಣೆಗಳ ಬಗ್ಗೆ ವಿವರಿಸಿದರು. ಹಂಪಿಯ ಜಾತ್ರೆ, ಫಲಪೂಜೆ, ಮತ್ತಿತರ ಆಚರಣೆಗಳು ವಿಜಯನಗರ ಸಾಮ್ರಾಜ್ಯದಿಂದ ಪ್ರಸ್ತುತದವರೆಗೂ ಮುಂದುವರೆದುಕೊಂಡು ಬಂದಿರುವುದು ನಮ್ಮ ಪರಂಪರೆಯ ಹೆಮ್ಮೆ. ಇಂತಹ ಪರಂಪರೆಯನ್ನು ವಿದ್ಯಾರ್ಥಿಗಳು, ಸಾರ್ವಜನಿಕರು ರಕ್ಷಿಸಿ ಮುಂದಿನ ಪೀಳಿಗೆಗೆ ಕೊಂಡೊಯ್ಯುವುದರ ಬಗ್ಗೆ ತಿಳಿಸಿದರು.





ಹಂಪಿ ವಿರುಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲಯದ ಪ್ರಾಂಶುಪಾಲ ಬಸವರಾಜ ಎಮ್ಮಿಗನೂರ ಮಾತನಾಡಿ, ಹಂಪಿಯ ಇತಿಹಾಸವು ನಮಗೆ ರೋಮಾಂಚನಕರವಾದ ಸಂಗತಿ. ಹಂಪಿ ಸುತ್ತಮುತ್ತಲಿನ ವಿದ್ಯಾರ್ಥಿಗಳು ಇಲಾಖೆಯೊಂದಿಗೆ ನಂಟನ್ನು ಇಟ್ಟುಕೊಂಡು ಹಂಪಿಯ ಕುರಿತ ಹೆಚ್ಚಿನ ಸಂಶೋಧನೆ ಮತ್ತು ಅಧ್ಯಯನದಲ್ಲಿ ತೊಡಗಿಸಿಕೊಳ್ಳಬೇಕೆಂದು ಕಿವಿ ಮಾತು ಹೇಳಿದರು.

ಮುನಿರಾಬಾದ್ ದಿ ಇನ್ಸಿಟ್ಯೂಷನ್ ಆಫ್ ಇಂಜಿನೀಯರ್ಸ್ (ಇಂಡಿಯಾ) ಅಧ್ಯಕ್ಷರಾದ ಡಾ. ಎಸ್. ಎಂ. ಶಶಿಧರ್ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದರು. ಹಂಪಿ ವಿರುಪಾಕ್ಷೇಶ್ವರ ದೇವಾಲಯವು ಸುಮಾರು ಒಂದೂವರೆ ಸಾವಿರ ವರ್ಷಗಳಿಂದ ನಿರಂತರ ಪೂಜೆ ಮತ್ತು ಆಚರಣೆಗಳನ್ನು ನಡೆಸಿಕೊಂಡು ಬಂದಿರುವುದು ನಮ್ಮ ಪರಂಪರೆಯ ಹೆಮ್ಮೆ; ಅಲ್ಲದೇ ಇಲ್ಲಿನ ದೇವಾಲಯಗಳು ಮತ್ತು ಇನ್ನಿತರೆ ಕಟ್ಟಡಗಳಲ್ಲಿನ ವೈಜ್ಞಾನಿಕತೆಯು ಇಂದಿನ ಇಂಜಿನಿಯರಿಂಗ್ ಕ್ಷೇತ್ರಕ್ಕೆ ಸ್ಫೂರ್ತಿಯಾಗಿವೆ ಎಂದ ಅವರು, ಅಂದಿನ ಇಂಜಿನಿಯರಿಂಗ್ ಕೌಶಲ್ಯ ಮತ್ತು ಜ್ಞಾನವನ್ನು ಪ್ರಶಂಸಿಸಿದರು.

ಡಾ. ಎಸ್ ಎಸ್ ಸಾತ್ಕಾರ್ ಸಹಾಯಕ ಪ್ರಾಧ್ಯಾಪಕರು ಇತಿಹಾಸ ವಿಭಾಗ ಎಸ್.ಬಿ.ಬಿ.ಎನ್. ಬಿಎಡ್ ಪದವಿ ಮಹಾವಿದ್ಯಾಲಯ, ಡಾ. ವೀಣಾ, ಸಹಾಯಕ ಪ್ರಾಧ್ಯಾಪಕರು ಹಂಪಿ ವಿರುಪಾಕ್ಷೇಶ್ವರ ಸ್ವಾಮಿ ಪದವಿ ಮಹಾವಿದ್ಯಾಲಯ, ಕಮಲಾಪುರ, ಇಲಾಖೆಯ ಸಿಬ್ಬಂದಿ ವರ್ಗದವರು, ದಿನಗೂಲಿ ನೌಕರರು, ವಿದ್ಯಾರ್ಥಿಗಳು ಇದ್ದರು. ಕಾರ್ಯಕ್ರಮಕ್ಕೆ ಮುಂಚೆ ಉತ್ಖನ್ನನ ನೆಲೆ ಮತ್ತು ವೀರಭದ್ರ ದೇವಾಲಯದಲ್ಲಿ ಶ್ರಮದಾನದಿಂದ ಸ್ವಚ್ಛತೆ ಮಾಡಲಾಯಿತು.

# ನರೇಗಾ ಕಾರ್ಮಿಕರಿಗೆ 370 ರೂ ಸಮಾನ ಕೂಲಿ

## ಸ್ತ್ರೀ ಚೇತನ, ಉದ್ಯೋಗ ಚೀಟಿ ಪರಿಷ್ಕರಣೆ ಅಭಿಯಾನಕ್ಕೆ ಚಾಲನೆ

## ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳು : ವಿಜಯಕುಮಾರ್



**ಹಂಪಿ ಟೈಮ್ಸ್ ಕೊಟ್ಟೂರು**

ಉದ್ಯೋಗ ಖಾತ್ರಿ ಯೋಜನೆಯಡಿ ಪುರುಷರು ಹಾಗೂ ಮಹಿಳೆಯರಿಗೆ ಸಮಾನ ಕೂಲಿ 370 ರು.ಗಳನ್ನು ನೀಡಲಾಗುತ್ತದೆ ಎಂದು ಸಹಾಯಕ ನಿರ್ದೇಶಕ (ಗ್ರಾ.ಉ) ಹೆಚ್.ವಿಜಯಕುಮಾರ್ ಹೇಳಿದರು.

ಜಿಲ್ಲಾ ಪಂಚಾಯಿತಿ ವಿಜಯನಗರ ಹಾಗೂ ಕೊಟ್ಟೂರು ತಾಲ್ಲೂಕು ಪಂಚಾಯಿತಿ ಸಹಯೋಗದಲ್ಲಿ ಹಮ್ಮಿಕೊಂಡಿರುವ ಸ್ತ್ರೀ ಚೇತನ ಹಾಗೂ ನರೇಗಾ ಉದ್ಯೋಗ ಚೀಟಿ ಪರಿಷ್ಕರಣೆ ಅಭಿಯಾನಕ್ಕೆ ರಾಂಪುರ ಗ್ರಾಮ ಪಂಚಾಯಿತಿಯ ಜಾಗಟಗೇರಿ ಗ್ರಾಮದ ನಾಲಾ ಹೂಳೆತ್ತುವ ಕಾಮಗಾರಿಗೆ ಗುರುವಾರ ಚಾಲನೆ ನೀಡಿ ಮಾತನಾಡಿದರು. ನರೇಗಾ ಯೋಜನೆಯ ಉದ್ಯೋಗ ಖಾತ್ರಿ ಕೆಲಸಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಆಗಮಿಸಬೇಕು. ಒಂದು ಉದ್ಯೋಗ ಚೀಟಿಗೆ ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳನ್ನು ನೀಡಲಾಗಿದ್ದು, ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಇದೇ ರೀತಿ ಉದ್ಯೋಗ ಚೀಟಿಯಲ್ಲಿ ಹೆಸರು ತಪ್ಪಾಗಿರುವುದು, ಆಧಾರ್ ಸೀಡ್, ಆಧಾರ್ ಬೇಸ್ಡ್ ಪೇಮೆಂಟ್, ವಿಶೇಷ ಉದ್ಯೋಗ ಚೀಟಿ ಹೀಗೆ ಏನಾ ದರೂ ಬದಲಾವಣೆ ಮಾಡಬೇಕಿದ್ದಲ್ಲಿ ದಾಖಲೆಗಳನ್ನು ಗ್ರಾಮ ಪಂಚಾಯಿತಿಗಳಿಗೆ ನೀಡಿ ಸರಿಪಡಿಸಿಕೊಳ್ಳಬಹುದು ಎಂದು ಹೇಳಿದರು.

ಕೂಲಿಕಾರರ NMMS ಹಾಜರಾತಿಯನ್ನು ಎರೆಡು ಬಾರಿ ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಭೌತಿಕ ಹಾಜರಾತಿಗೆ ಹಾಗೂ NMMS ಯಾಪ್ ಹಾಜರಾತಿಗೆ ಹೊಂದಾಣಿಕೆಯಾಗಬೇಕು. ಈ ಬಗ್ಗೆ ಮೇಟಿಗಳು ಹೆಚ್ಚಿನ ಗಮನ ಹರಿಸಬೇಕು. ಜಿಪಂ ಸಿಇಒ ನಿರ್ದೇಶನ ಹಾಗೂ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳು ಡಾ.ಬಿ.ಆನಂದ್ ಕುಮಾರ್ ಅವರ ಮಾರ್ಗದರ್ಶನ ದಂತೆ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದರು.

ಗ್ರಾಪಂ ಅಭಿವೃದ್ಧಿ ಅಧಿಕಾರಿ ಸಿ. ಉಮಾಪತಿ ಮಾತನಾಡಿ, ನರೇಗಾ ಯೋಜನೆಯ ನಿಯಮಾನುಸಾರ ಕೂಲಿ ಕಾರರು ಕೆಲಸ ನಿರ್ವಹಿಸುವಂತೆ ತಿಳಿಸಿದರು.

ಐ.ಇ.ಸಿ. ಸಂಯೋಜಕ ಪ್ರಭುಕುಮಾರ್, ಗ್ರಾಮ ಕಾಯಕಮಿತ್ರರು, ಕಾಯಕಬಂಧುಗಳು, ಗ್ರಾಪಂ ಸಿಬ್ಬಂದಿ, ಕೂಲಿಕಾರರು ಇದ್ದರು. ಉದ್ಯೋಗ ಚೀಟಿ ಬೇರ್ಪಡಿಸುವುದು, ಹೊಸ ಕೂಲಿಕಾರರಿಗೆ ಉದ್ಯೋಗ ಚೀಟಿ ನೀಡಲಾಯಿತು.



**ನರೇಗಾ ಯೋಜನೆಯಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಜಾಗೃತಿ ಮೂಡಿಸುವ ಉದ್ದೇಶದಿಂದ ಉದ್ಯೋಗ ಚೀಟಿ ಪರಿಷ್ಕರಣೆ ಹಾಗೂ ಸ್ತ್ರೀ ಚೇತನ ಅಭಿಯಾನ ವನ್ನು ಗ್ರಾಪಂ ಗಳಲ್ಲಿ ಹಮ್ಮಿಕೊಳ್ಳಲಾಗಿದೆ. ಪುರುಷರಿಗೆ ಮತ್ತು ಮಹಿಳೆಯರಿಗೆ ಸಮಾನ ವೇತನ ನೀಡಲಾಗುತ್ತಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲ ಭಾಗವಹಿಸಿ ಪ್ರಯೋಜನ ಪಡೆಯಬೇಕು.**

– ಡಾ.ಬಿ.ಆನಂದ್ ಕುಮಾರ್, ಇಒ, ತಾಪಂ, ಕೊಟ್ಟೂರು

# ಬಸವ ಜಯಂತಿಗೆ ಅಗತ್ಯ ಸಿದ್ಧತೆ ಕೈಗೊಳ್ಳಿ: ಶಿವಾನಂದ

**ಹಂಪಿ ಟೈಮ್ಸ್ ರಾಯಚೂರು**

ಜಿಲ್ಲಾಡಳಿತದಿಂದ ಏಪ್ರಿಲ್ 30ರಂದು ನಡೆಯಲಿರುವ ಶ್ರೀ ಬಸವ ಜಯಂತ್ಯುತ್ಸವ ಆಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏಪ್ರಿಲ್ 17ರ ಗುರುವಾರ ನಡೆದ ಶ್ರೀ ಬಸವ ಜಯಂತ್ಯುತ್ಸವದ ಪೂರ್ವಭಾವಿ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ವರ್ಷವೂ ಅದ್ದೂರಿಯಾಗಿ ಹಾಗೂ ವಿಜೃಂಭಣೆಯಿಂದ ಜಯಂತಿಯನ್ನು ಆಚರಿಸಲು ಅಗತ್ಯ ಕ್ರಮಕೈಗೊಳ್ಳಬೇಕು. ಏಪ್ರಿಲ್ 30ರ ಬೆಳಿಗ್ಗೆ 9 ಗಂಟೆಗೆ ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದೆ. ಅಂದು ಸಂಜೆ ಮೆರವಣಿಗೆ ನಡೆಯಲಿದ್ದು, ಈ ಜಯಂತಿ ಕಾರ್ಯಕ್ರಮಗಳಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ತಪ್ಪದೇ ಹಾಜರಿರಬೇಕು. ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ತಿಳಿಸಿದರು.

ಮಹಾತ್ಮರ ಭಾವಚಿತ್ರಗಳಿಗೆ ಮಾಲಾರ್ಪಣೆ, ಪೂಜಾ ಕಾರ್ಯಕ್ರಮ ಸರಿಯಾಗಿ ನಡೆಯಬೇಕು. ಹೂದಾನಿಗಳಿಂದ ವೇದಿಕೆಯನ್ನು ಅಲಂಕಾರಗೊಳಿಸಬೇಕು. ವೀರಶೈವ ಕಲ್ಯಾಣ ಮಂಟಪದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಸ್ವಚ್ಛತೆ ಕಾಪಾಡಲು ಮಹಾನಗರ ಪಾಲಿಕೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅಗತ್ಯ ಕ್ರಮವಹಿಸಬೇಕು. ಶಿಷ್ಟಾಚಾರ ಪ್ರಕಾರ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಗಣ್ಯರಿಗೆ ತಲುಪಿಸಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.


ಸರ್ಕಾರಿ, ಅರೆ ಸರಕಾರಿ >>4



ಪ್ರತಿ ಭಾನುವಾರ ಹಂಪಿ ಟೈಮ್ಸ್
ವರ್ಣರಂಜಿತ ಜಾಹೀರಾತು ಪುರವಣಿ!
ಸ್ಥಳೀಯ ಉದ್ದಿಮೆದಾರರಿಗೆ, ವ್ಯಾಪಾರಸ್ಥರಿಗೆ ವಿಶೇಷ ಅವಕಾಶ!
E-PAPER USER ENGAGEMENT 1,50,000+
ನಿಮ್ಮ ಸಂಸ್ಥೆಯ ಉತ್ಪನ್ನ ಮಾರಾಟ / ಸೇವೆ ಪ್ರಚಾರಕ್ಕಾಗಿ 'ಹಂಪಿ ಟೈಮ್ಸ್'
ನಿಮಗಾಗಿ ತರಲಿದೆ ವಿಶೇಷ ಜಾಹೀರಾತು ಪುಟಗಳು ಮತ್ತು ಮಾರುಕಟ್ಟೆ ಪುರವಣಿ!
ನಂ. 1 ಜಿಲ್ಲಾಮಟ್ಟದ ದಿನಪತ್ರಿಕೆ
■ ಕಡಿಮೆ ಖರ್ಚು
■ ಹೆಚ್ಚು ಕವರೆಜ್
■ ವಿನ್ಯಾಸದ ಬಣ್ಣದ ಪುಟಗಳು
■ ನೇರವಾಗಿ ಸ್ಥಳೀಯ ಗ್ರಾಹಕರಿಗೆ ತಲುಪುವ ಭರವಸೆ!
Print and Digital Edition
HAMPI TIMES SPL OFFER
SHINE SUNDAY
UP TO 50 % OFF
LIMITED TIME ONLY
HOSAPETE-VIJAYANAGARA DIST.
Contact Us 9448633038
ಹಂಪಿ ಟೈಮ್ಸ್

# ಅಕ್ಕಮಹಾದೇವಿ ವಿಚಾರಧಾರೆ ಸರ್ವಕಾಲಕ್ಕೂ ಜೀವಂತ


■ ಜಿ.ಆರ್.ಬಸವರಾಜೇಶ್ವರಿ

12ನೇ ಶತಮಾನದದಲ್ಲಿ ಉಡಿತಡಿ ಗ್ರಾಮದಲ್ಲಿ ಜನಿಸಿ ಚೆನ್ನಮಲ್ಲಿಕಾರ್ಜುನವೆಂಬ ಅಂಕಿತನಾಮದಿ ಖ್ಯಾತಿಯ ಪಡೆದ ಜಗದ ಬೆಳಕಾದ ಅಕ್ಕಮಹಾದೇವಿ ಶರಣ ಸಾಹಿತ್ಯ ಮೊದಲ ವಚನಗಾರ್ತಿಯಂಬ ಕೀರ್ತಿಗೆ ಪಾತ್ರರಾಗಿದ್ದಾರೆ.



ಅಕ್ಕನವರು ವೈಭವದ ಜೀವನ ತಿರಸ್ಕರಿಸಿ ಬಂದುಗಳಿಂದ ದೂರವಾಗಿ ಅರಸೊತ್ತಿಗೆಯನ್ನು ತ್ಯಜಿಸಿ ಶರಣರೊಂದಿಗೆ ಸೇರಿ ಅನುಭವ ಮಂಟಪ ಪ್ರವೇಶಿಸಿ ವಚನಸಾಹಿತ್ಯವ ಶ್ರೀಮಂತಗೊಳಿಸಿ ನಿಜ ಭಕ್ತಿಯನು ವಚನದಲ್ಲಿ ಪ್ರಸ್ತುತ ಪಡಿಸಿದ್ದಾರೆ. ಅನುಭವ ಮಂಟಪದಲ್ಲಿ ಅಕ್ಕನವರನ್ನು ಮಡಿವಾಳ ಮಾಚಿದೇವರಿಗೆ ಸ್ವಾಗತಿಸಲು ಹೇಳಿದರು ಮತ್ತು ಬಸವಣ್ಣನವರು ಎಲ್ಲಾ ಶರಣ ಬಂಧುಗಳು ಬಹಳ ಗೌರವದಿಂದ ಅಕ್ಕನನ್ನು ಬರಮಾಡಿಕೊಂಡರು. ಅಲ್ಲಿಂದ ಅಲ್ಲಮ್ಮ ಪ್ರಭುದೇವರು ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸಮಾಧಾನವಾಗಿ ಉತ್ತರಿಸುತ್ತಾ ಪರಮೇಶ್ವರನೇ ಎನ್ನ ಗಂಡನನ್ನಾಗಿ ಸ್ವೀಕರಿಸಿ ಅರ್ಪಣೆಮಾಡಿಕೊಂಡಿದ್ದೇನೆ ನನ್ನ ಜೀವನದಲ್ಲಿ ಇದುವರೆಗೂ ಏನೇನು ಆಗಿದೆಯೋ ಅದೆಲ್ಲವೋ ದೈವ ಕೃಪೆಯಿಂದಲೇ ಆಗಿದೆ. ಸ್ತ್ರೀ ಸೌಂದರ್ಯದ ವ್ಯರ್ಥ ವ್ಯಾಮೋಹದ ಬಗ್ಗೆ ಅಲ್ಲಮ್ಮ ಪ್ರಶ್ನೆಗೆ

**ಕಾಯ ಕರ್ರನೆ ಕಂದಿಹಾರೇನಯ್ಯ?**
**ಕಾಯ ಮಿರ್ರನೆ ಮಿಂಚಿದರೇನಯ್ಯ?**
**ಅಂತರಂಗ ಶುದ್ಧವಾದ ಬಳಿಕ**
**ಚೆನ್ಮಲ್ಲಿಕಾರ್ಜುನಿಗೆ ಒಲಿದ ಅಂಗವು**
**ಹೇಗಿದ್ದರೆನಯ್ಯ?**



ಪ್ರಭುವೇ ಹೇಳುವಲ್ಲಿ ತನ್ನೆಲ್ಲವನ್ನು ಚೆನ್ನಾಮಲ್ಲಿಕಾರ್ಜುನಿಗೆ ಅರ್ಪಿಸಿದ್ದೆನಯ್ಯ ಎಂದೆಂದೂ ಅಳಿಯದ ಅಮರ ಪಾವಿತ್ರಾತೆಯನ್ನು ತಿಳಿಸುವ ಪ್ರಯತ್ನವ ಮಾಡಿದ್ದಾರೆ.

ಅಕ್ಕನ ಮಾತನ್ನು ಆಲಿಸಿದ ಅಲ್ಲಮರು ಅಕ್ಕ ನೀನು ವಿಶ್ವ ಸ್ತ್ರೀ ಕುಲದ ಜ್ಯೋತಿ, ದಿಟ್ಟ ಹೆಣ್ಣು , ದೀರೆ ತಾಯಿ ಎಂದು ಅಕ್ಕ ನೀನ್ನ ಪಾದಗಳಿಗೆ ನಮೋ ನಮೋ ಎಂದು ಕೈ ಮುಗಿದರು.

ಅಕ್ಕನ ಮಾತಿಗೆ ಚನ್ನಬಸವಣ್ಣನವರು ಅಕ್ಕನ ಹಿರಿತನವ ಕೊಂಡಾಡಿದರು. ಸಿದ್ದರಾಮರು ಅರಿವಿಗೆ ಹಿರಿಯ ಕಿರಿದಂತೆ ಹೇಳಿದಿರಿ ಎಂದು ಹೊಗಳಿದರು. ಬಸವಣ್ಣನವರು ಅಕ್ಕನನ್ನು ಅಂದಿನ ಅನುಭವಮಂಟಪದ ಗೋಷ್ಠಿಯಲ್ಲಿ ಪಾಲ್ಗೊಳುವಂತೆ. ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿ ಕೊಟ್ಟ ಕಾಲವಾಗಿತ್ತು.

ನರ ಜನ್ಮವ ತೊಡೆದು
ಹರ ಜನ್ಮವ ಮಾಡಿದ ಗುರುವೇ
ಭವ ಬಂಧನ ಬಿಡಿಸಿ
ಪರಮಾತ್ಮನ ತೋರಿದ ಗುರುವೇ
ಭವ ಎಂಬುದ ತೊಡದು ಭಕ್ತಿ ಎಂದೆನಿಸುವ ಗುರುವೇ ಚನ್ನಮಲ್ಲಿಕಾರ್ಜುನ
ತಂದೆನ್ನ ಕೈವಶಕೆ ಕೊಟ್ಟ ಗುರುವೇ
ನಮೋ ನಮೋ.
ಎಂಬಲ್ಲಿ ಅಕ್ಕನ ವಿಚಾರಧಾರೆ ದೂರದೃಷ್ಟಿ
ಇಂದಿಗೂ ಜೀವಂತವಾಗಿವೆ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಲಿವರ್ ರಕ್ಷಣೆಗಿರಲಿ ಮುನ್ನೆಚ್ಚರಿಕೆ



ಇಂದಿನ ಒತ್ತಡದಿಂದ ಕೂಡಿದ ಜೀವನ ಶೈಲಿ ಹಾಗೂ ಆಹಾರ ಕ್ರಮದಲ್ಲಿನ ಬದಲಾವಣೆಗಳಿಂದಾಗಿ ದೇಹದಲ್ಲಿಯೂ ಹಲವಾರು ನ್ಯೂನತೆಗಳು ಕಾಣಿಸಿಕೊಳ್ಳುತ್ತಿರುವುದು ಕೂಡ ಸತ್ಯ ಸಂಗತಿಯಾಗಿದೆ. ಇದಕ್ಕೆ ಯಕೃತ್ ಕೂಡ ಹೊರತಾಗಿಲ್ಲ. ಈ ಯಕೃತ್ ಅನ್ನು ಆಂಗ್ಲ ಭಾಷೆಯಲ್ಲಿ ಲಿವರ್ ಎಂದು ಕರೆಯಲಾಗುತ್ತದೆ. ಯಕೃತ್ತಿನ ಆರೋಗ್ಯ ಕಾಪಾಡುವುದು, ಯಕೃತ್ತಿನ ಕಾಯಿಲೆಗಳ ತೀವ್ರತೆ(ಯಕೃತ್ತಿನ ಕ್ಯಾನ್ಸರ್, ಕೊಬ್ಬು ತುಂಬಿದ ಲಿವರ್(ಪ್ಯಾಟಿ ಲಿವರ್), ಲಿವರ್ ಸಿರೋಸಿಸ್)ಆರಂಭಿಕ ಪತ್ತೆ ಮತ್ತು ತಡೆಗಟ್ಟುವಿಕೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಪ್ರತಿ ವರ್ಷ ಏಪ್ರಿಲ್–19ರಂದು ವಿಶ್ವ ಯಕೃತ್ತಿನ ದಿನವನ್ನಾಗಿ ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಪ್ರತಿ ವರ್ಷ ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸಲಾಗುವ ಈ ದಿನವನ್ನು ಈ ವರ್ಷ 'ಆಹಾರವೇ ಔಷಧ' ಎಂಬ ಥೀಮ್‌ನೊಂದಿಗೆ ಆಚರಿಸಲಾಗುತ್ತಿದೆ. ಈ ಥೀಮ್ ಯಕೃತ್ತಿನ ಆರೋಗ್ಯವನ್ನು ಕಾಪಾಡುವಲ್ಲಿ ಆಹಾರದ ಆಯ್ಕೆ ಹೇಗಿರಬೇಕು? ಸಮತೋಲಿತ ಆಹಾರವು ಯಕೃತ್ತಿನ ಆರೋಗ್ಯವನ್ನು ಕಾಪಾಡುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂಬುದನ್ನು ಒತ್ತಿ ಹೇಳುತ್ತದೆ. ಮಾನವನ ದೇಹದಲ್ಲಿ ಎರಡನೇ ಅತಿ ದೊಡ್ಡ ಮತ್ತು ಅತ್ಯಂತ ಪ್ರಮುಖ ಅಂಗವಾಗಿರುವ ಯಕೃತ್ತು ಕೇವಲ ಚಯಾಪಚಯ ಕ್ರಿಯೆ, ಜೀರ್ಣಕ್ರಿಯೆ, ರೋಗನಿರೋಧಕ ಶಕ್ತಿ, ವಿಷಕಾರಿ ವಸ್ತುಗಳ ಶೋಧನೆ, ಜೀವಸತ್ವಗಳು, ಖನಿಜಗಳು, ಗ್ಲುಕೋಸ್ ಇತ್ಯಾದಿಗಳ ಸಂಗ್ರಹಣೆಗೆ ಮಾತ್ರ ಸೀಮಿತವಾಗಿರದೇ ಹಲವಾರು ಮಹತ್ವದ ಕಾರ್ಯಗಳನ್ನು ಕೂಡ ನಿರ್ವಹಿಸುತ್ತದೆ. ಆಹಾರವು ಪಚನವಾಗಲು ಅಗತ್ಯವಿರುವ ಪಿತ್ತರಸವನ್ನು ಉತ್ಪಾದಿಸಲು ಕೂಡ ಯಕೃತ್ ಸಹಾಯಕವಾಗಿದೆ. ದೇಹದ ರಕ್ತ ಹೆಪ್ಪುಗಟ್ಟಲು ಅವಶ್ಯಕವಾದ 3,5,7,9 ಎಂಬ ರಕ್ತ ಹೆಪ್ಪುಗಟ್ಟಲು ಕಾರಣವಾಗುವ ಅಂಶಗಳನ್ನು ಯಕೃತ್ ಉತ್ಪಾದಿಸುತ್ತದೆ. ಈ ಕಾರಣದಿಂದಲೇ ಯಕೃತ್ತಿನ ತೊಂದರೆಯಿಂದ ಬಳಲುವವರಿಗೆ ಹೆಚ್ಚು ರಕ್ತಸ್ರಾವವಾಗುವ ಸಾಧ್ಯತೆಯ ಜೊತೆಗೆ ರಕ್ತಹೆಪ್ಪುಗಟ್ಟಲು ಹೆಚ್ಚಿನ ಸಮಯವೂ ತೆಗೆದುಕೊಳ್ಳುತ್ತದೆ ಎಂದು ಹೇಳಲಾಗುತ್ತದೆ. ಯಕೃತ್ ಸ್ವಯಂ ಗುಣಪಡಿಸುವ ವಿಶಿಷ್ಟ ಲಕ್ಷಣವನ್ನು ಹೊಂದಿದೆ. ಶೇ.50 ಕ್ಕಿಂತಲೂ ಹೆಚ್ಚು ಹಾನಿಗೊಳಗಾದ ನಂತರವೂ ಕೂಡ ಅದು ಮತ್ತೆ ಬೆಳೆಯಬಲ್ಲ ಅಥವಾ ಪುನರುತ್ಪಾದನೆ ಹೊಂದ ಬಲ್ಲ ಸಾಮರ್ಥ್ಯ ವನ್ನು ಹೊಂದಿದೆ. ಹೀಗಾಗಿ ಯಕೃತ್ (ಲಿವರ್) ಎಂಬುದು ಮಾನವನ ದೇಹದಲ್ಲಿ ಹಾನಿಗೊಳಗಾದ ನಂತರವೂ ಮತ್ತೆ ಬೆಳೆಯ ಬಲ್ಲ ಏಕೈಕ ಆಂತರಿಕ ಅಂಗವೆಂದು ಗುರುತಿಸ ಲಾಗಿದೆ. ಆದರೆ ಯಕೃತ್ತಿನ ಯಾವುದೇ ಅಸಹಜತೆಗಳು ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಕಾರಣ ವಾಗುತ್ತದೆ. ಜಾಗತಿಕವಾಗಿ ಲಕ್ಷಾಂತರ ಜನರು



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ
Scan For Digital Colourful
HAMPI TIMES E-paper




ಯಕೃತ್ತಿನ ಕಾಯಿಲೆಗಳಿಂದ ಸಾವನ್ನ ಪ್ಪುತ್ತಾರೆ. ಅದರಲ್ಲಿ ಯಕೃತ್ ಸಿರೊಸಿಸ್ ಸಂಬಂಧಿತ ಕಾರಣಗಳು ಕೇವಲ ಅರ್ಧದಷ್ಟು ಮಾತ್ರ, ಉಳಿದವು ವೈರಲ್ ಹೆಪಟೈಟಿಸ್ ಹಾಗೂ ಇನ್ನಿತರ ಯಕೃತ್ ಸಂಬಂಧಿತ ಅಸಹಜ ಅಂಶಗಳಾಗಿವೆ.

ಜಾಗತಿಕವಾಗಿ ಲಕ್ಷಾಂತರ ಜನರು ಮದ್ಯ ಸಂಬಂಧಿತ ಯಕೃತ್ತಿನ ಕಾಯಿಲೆಯಿಂದ ಬಳಲುತ್ತಿದ್ದಾರೆ. ಯಕೃತ್ತಿನ ಹಾನಿಯ ಲಕ್ಷಣಗಳನ್ನು ನೋಡುವುದಾದರೆ ಕಾಮಾಲೆ, ಕಡಿಮೆ ತೂಕ, ಹಸಿವಾಗದಿರುವುದು, ವಾಕರಿಕೆ ಮತ್ತು ವಾಂತಿ, ದೇಹಕ್ಕೆ ಸುಸ್ತು ಅಥವಾ ಆಯಾಸ, ಹೊಟ್ಟೆ ನೋವು ಈ ಗುಣಲಕ್ಷಣಗಳಿಂದ ಯಕೃತ್ ಸಮಸ್ಯೆಯಾಗಿರುವುದು ತಿಳಿದು ಬರುತ್ತದೆ. ಆರೋಗ್ಯಕರ ಯಕೃತ್ತಿಗೆ ಪ್ರೋಟೀನ್ ಮತ್ತು ನಾರಿನಾಂಶ ಸಮೃದ್ಧವಾಗಿರುವ ಸಮತೋಲಿತ ಆಹಾರವನ್ನು ಸೇವಿಸುವುದು. ಒತ್ತಡವನ್ನು ನಿಯಂತ್ರಣದಲ್ಲಿಡಲು ನಿಯಮಿತ ವ್ಯಾಯಾಮ ಮಾಡುವುದು. ಮದ್ಯಪಾನ ಮತ್ತು ಧೂಮಪಾನ, ಜಂಕ್ ಫುಡ್ ಸೇವನೆಯಿಂದ ದೂರವಿರುವುದು ಒಳ್ಳೆಯದು. ಸ್ವಯಂ ಔಷಧಿಗಳನ್ನು ತಪ್ಪಿಸಿ. ಸಮಯಕ್ಕೆ ಸರಿಯಾಗಿ ಲಸಿಕೆಗಳನ್ನು ತೆಗೆದುಕೊಳ್ಳುವುದು. ಆರೋಗ್ಯಕರ ತೂಕವನ್ನು ಕಾಪಾಡಿಕೊಳ್ಳುವುದು. ತಾಜಾಭರಿತ ಸೊಪ್ಪು, ತರಕಾರಿಗಳು, ಬೆಳ್ಳುಳ್ಳಿ, ಸೇಬು ಹಣ್ಣು, ದ್ರಾಕ್ಷಿ, ಕ್ಯಾರೆಟ್, ಸ್ಟ್ರಾಬೆರ್ರಿ ಸೇವನೆ ಉತ್ತಮ. ಹೆಚ್ಚು ನೀರನ್ನು ಕುಡಿಯುವುದು. ಕಲುಷಿತ ಸೂಜಿಗಳನ್ನು ಹಂಚಿಕೊಳ್ಳುವುದು ಮತ್ತು ಅಸುರಕ್ಷಿತ ಲೈಂಗಿಕತೆಯಿಂದ ದೂರವಿರುವುದು. ಯಕೃತ್ತಿನ ಆರೋಗ್ಯ ವೃದ್ಧಿಗೆ ಸಿಟ್ರಸ್ ಹಣ್ಣುಗಳು ತುಂಬಾ ಸಹಾಯಕವಾಗಿವೆ. ಈ ಸಿಟ್ರಸ್ ಹಣ್ಣುಗಳು ಯಕೃತ್‌ನ್ನು ಉತ್ತೇಜಿಸುವ ಮೂಲಕ ನೀರಿನಿಂದ ಹೀರಿಕೊಳ್ಳುವ ಹಾನಿಕಾರಕ ಪದಾರ್ಥಗಳನ್ನು ಒಡೆಯಲು ನೆರವಾಗುತ್ತದೆ. ವಾಲ್ನಟ್(ಆಕ್ರೋಟ)ಗಳು ಅಮೈನೋ ಆಮ್ಲಗಳು, ಒಮೆಗಾ–3 ಕೊಬ್ಬಿನಾಮ್ಲಗಳಂತಹ ಸಾಕಷ್ಟು ಪೌಷ್ಠಿಕಾಂಶಗಳಿಂದ ತುಂಬಿರುವುದರಿಂದ ಆರೋಗ್ಯಕರ ಯಕೃತ್ತಿಗೆ ಸಹಾಯ ಮಾಡುತ್ತವೆ. ಅತಿಯಾದ ಮದ್ಯಪಾನಿಗಳಾಗಿದ್ದರೆ ಅಥವಾ ಯಕೃತ್ತಿಗೆ ಸಂಬಂಧಿಸಿದ ಸಮಸ್ಯೆಗಳ ಕೌಟುಂಬಿಕ ಇತಿಹಾಸ ಹೊಂದಿದ್ದರೆ ಯಕೃತ್ತಿನ ಹಾನಿಯ ಅಪಾಯದ ಬಗ್ಗೆ ತಿಳಿಯಲು ಪರೀಕ್ಷೆಗೆ ಒಳಗಾಗುವುದು ಉತ್ತಮ. ಏಕೆಂದರೆ ಆರಂಭಿಕ ಪತ್ತೆ ಪರಿಣಾಮಕಾರಿ ಚಿಕಿತ್ಸೆ ಪಡೆಯಲು ಹಾಗೂ ಗುಣಮುಖರಾಗಲು ತುಂಬಾ ಸಹಾಯಕವಾಗಬಲ್ಲದು. ಮದ್ಯಾಪಾನವು ಯಕೃತ್ತಿನ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಾಗಿರುವುದರಿಂದ ಮದ್ಯಪಾನ ಚಟವನ್ನು ಬಿಟ್ಟು ಬಿಡುವುದು ಅತೀ ಅಗತ್ಯ ಕ್ರಮವಾಗಿದೆ.

ಒಟ್ಟಾರೆಯಾಗಿ, ಕಾಯಿಲೆ ಯಾವುದೇ ಸ್ವರೂಪದ್ದಾದರೂ ಹೀಗೇಕಾಯಿತು? ಎಂದು ಅದರ ಬಗ್ಗೆಯೇ ತೀವ್ರವಾದ ಚಿಂತೆಗೆ ಒಳಗಾಗುವುದರಿಂದ ಯಾವುದೇ ಪ್ರಯೋಜನವಿಲ್ಲ. ಅದರ ಬದಲು ಕಾಯಿಲೆಯ ಬಗ್ಗೆ ಸಂಪೂರ್ಣ ತಿಳುವಳಿಕೆಯನ್ನು ಪಡೆದುಕೊಂಡು ತಜ್ಞ ವೈದ್ಯರಿಂದ ಚಿಕಿತ್ಸೆಯನ್ನು ಪಡೆದುಕೊಂಡು ಭಯರಹಿತವಾಗಿ ಜೀವನವನ್ನು ಮುನ್ನೆಡೆಸುವುದು ತುಂಬಾ ಅಗತ್ಯವಾಗಿದೆ.

# ಕಪ್ಪು ಚಿನ್ನ...ಕಾಳು ಮೆಣಸು

■ **ವೀಣಾ ಹೇಮಂತ್ ಗೌಡ ಪಾಟೀಲ್** ಮುಂಡರಗಿ



ಮನೆಯಲ್ಲಿ ಯಾರಾದರೂ ವಿಪರೀತ ನೆಗಡಿ, ಕಫದಿಂದ ಬಳಲುತ್ತಿದ್ದರೆ ಗೋದಿ ಹಿಟ್ಟಿನ ಕಣಕದಿಂದ ಚಪಾತಿಯನ್ನು ಲಟ್ಟಿಸಿ ಸಣ್ಣದಾಗಿ ಕೊರೆಯಬೇಕು. ಸಾಕಷ್ಟು ನೀರು ಹಾಕಿ ಬೆಲ್ಲವನ್ನು ಕುದಿಸಿ ಅದಕ್ಕೆ ಕಾಳು ಮೆಣಸಿನ ಹುಡಿಯನ್ನು ಸೇರಿಸಿ ಲಟ್ಟಿಸಿ ಕೊರೆದ ತುಂಡುಗಳನ್ನು ಹಾಕಿ ಕುದಿಸಿ ಸೇವಿಸಿ ಹೊದ್ದು ಮಲಗಿದರೆ ಬೆಳಿಗ್ಗೆಯ ಹೊತ್ತಿಗೆ ಕಫ ಕರಗಿ ಉಸಿರಾಟ ಸರಾಗವಾಗುತ್ತದೆ. ಮೆಣಸಿನ ಕಡುಬು ಎಂದು ಹೇಳುವ ಈ ಪದಾರ್ಥವನ್ನು ವಿಪರೀತ ಶೀತ, ನೆಗಡಿ ಉಂಟಾದಾಗ ನಮಗೆ ಸೇವಿಸಲು ಹೇಳುತ್ತಿದ್ದರು.

ಕೆಲ ಚಳಿಯ ಪ್ರದೇಶಗಳಲ್ಲಿ ಪ್ರತಿ ದಿನ ಚಹಾ ಮಾಡುವಾಗ ಮಾಡುವಾಗ ಒಂದೆರಡು ಕಾಳುಮೆಣಸನ್ನು ಕುಟ್ಟಿ ಪುಡಿ ಮಾಡಿ ಚಹಾ ಪುಡಿ ಯೊಂದಿಗೆ ಹಾಕಿ ಕುಡಿಸಿ ಚಹಾ ಕುಡಿಯುತ್ತಾರೆ.

ಎರಡು ಕಾಳು ಮೆಣಸನ್ನು ಕುಟ್ಟಿ ಪುಡಿ ಮಾಡಿ ಜೇನುತುಪ್ಪದೊಂದಿಗೆ ಬೆರೆಸಿ ಕೂಡ ನೆಗಡಿ, ಕಫವನ್ನು ಹಿಮ್ಮೆಟ್ಟಿಸುತ್ತಾರೆ. ಹಲ್ಲು ನೋವು ಇದ್ದಾಗ ಕಾಳುಮೆಣಸಿನ ಪುಡಿಯನ್ನು ಉಪ್ಪಿನ ಪುಡಿಯೊಂದಿಗೆ ಕಲಸಿ ನೋವಿನ ಜಾಗದಲ್ಲಿ ಇಟ್ಟುಕೊಳ್ಳುತ್ತಾರೆ ಕೂಡ.

"ಕಪ್ಪು ಚಿನ್ನ"ಎಂದು ಕರೆಯಲ್ಪಡುವ ಕಾಳು ಮೆಣಸು ತನ್ನಲ್ಲಿ ಅಪಾರ ಔಷಧೀಯ ಗುಣಗಳನ್ನು ಹೊಂದಿದೆ. ಅಡುಗೆಗೆ ಈ ಕಪ್ಪು ಮೆಣಸು ನೀಡುವ ವಿಶಿಷ್ಟ ಖಾರದ ಸ್ವಾದ ಜಿಹ್ವಾ ಚಾಪಲ್ಯವನ್ನು ಕೆರಳಿಸಿ ಆಹಾರದ ರುಚಿಯನ್ನು ಹೆಚ್ಚಿಸುತ್ತದೆ.... ಈ ಕಪ್ಪು ಚಿನ್ನವನ್ನು ಅರಸಿಕೊಂಡು ಬಂದ ಬ್ರಿಟಿಷರು ಭಾರತವನ್ನು ಅಖಂಡ ಎರಡುವರೆನೂರು ವರ್ಷಗಳ ಕಾಲ ಆಳಿದ್ದು ಇದೀಗ ಇತಿಹಾಸದ ಪುಟಗಳಲ್ಲಿ ಸೇರಿ ಹೋಗಿದೆ. ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದಲ್ಲಿ ಬೆಳೆಯುವ ಈ ಸಾಂಬಾರ ಪದಾರ್ಥ ಆಯುರ್ವೇದ ಗುಣಲಕ್ಷಣಗಳನ್ನು ಹೊಂದಿದ್ದು ಅನೇಕ ತೊಂದರೆಗಳಿಗೆ ರಾಮಬಾಣವಾಗಿದೆ.

ಸಮಶೀತೋಷ್ಣ ವಲಯದಲ್ಲಿ ಬೆಳೆಯಲ್ಪಡುವ ಕರಿಮೆಣಸಿನ ಕಾಂಡಗಳನ್ನು ಸರಿಯಾಗಿ ಕ್ರಾಪ್ ಮಾಡಲಾಗುತ್ತದೆ... ಹೀಗೆ ಕ್ರಾಪ್ ಮಾಡಲಾದ ಗಿಡಗಳಲ್ಲಿ 25 ರಿಂದ 30ಕ್ಕೂ ಹೆಚ್ಚು ಶೀರ್ಷಕಗಳು ಇದ್ದು ಪ್ರತಿಯೊಂದು ಶೀರ್ಷಕಗಳು (ಗೊಂಚಲು) ಕಾಳು ಮೆಣಸಿನ ಹಣ್ಣಿನಿಂದ ತುಂಬಿರುತ್ತವೆ. ವೀಳ್ಯದೆಲೆಯ ಬಳ್ಳಿಯ ಜೊತೆ ಜೊತೆಯಾಗಿ ಬೆಳೆಸುವ ಕಾಳು ಮೆಣಸಿನ ಬಳ್ಳಿಯಲ್ಲಿರುವ ಹಣ್ಣನ್ನು ಆರಿಸಿ ತಂದು ಒಣಗಿಸಿ ಕರಿ ಮೆಣಸಿನ ಕಾಳನ್ನು ಪಡೆಯುತ್ತಾರೆ.

ಇತ್ತೀಚೆಗೆ ಕರಿಮೆಣಸಿನ ಕಾಳುಗಳನ್ನು ಒಣಗಿಸುವ ಯಂತ್ರಗಳು ಲಭ್ಯವಿದ್ದು ಆರಿಸಿ ತಂದ ಕಾಳು ಮೆಣಸಿನ ಹಣ್ಣುಗಳನ್ನು ಒಂದು ಕುದಿ ಕುದಿಸಿ ಆರಲು ಬಿಡುತ್ತಾರೆ... ಹೀಗೆ ಆರಿದ ಹಣ್ಣುಗಳು ತಮ್ಮ ಹೊರಪದರವನ್ನು ಕಳಚಿಕೊಂಡು ಕಾಳು ಗಟ್ಟಿಯಾಗಲು ಸಹಾಯಕವಾಗುತ್ತದೆ ಮತ್ತು ಗಟ್ಟಿಯಾಗುವ ಪ್ರಕ್ರಿಯೆಯಲ್ಲಿ ಮುದುಡುತ್ತವೆ. ಇವುಗಳಲ್ಲಿ ಕಪ್ಪು ಮೆಣಸುಗಳನ್ನು ಆರಿಸಿ ತೆಗೆಯುತ್ತಾರೆ. ಅದರಲ್ಲಿಯೂ ಉಳಿದವುಗಳನ್ನು ಬಿಳಿಯ ಮೆಣಸಿನ ಕಾಳಿನ ರೂಪದಲ್ಲಿ ಬಳಸುತ್ತಾರೆ. ಭಾರತದ ಮಲಬಾರ್ ಪ್ರದೇಶದಲ್ಲಿ ಬೆಳೆಯುವ ಮಲಬಾರ್ ಚೆರ್ರಿ ಮತ್ತು ತಲ್ಲಿಚೇರಿ ಮೆಣಸುಗಳು ಪ್ರಸಿದ್ಧವಾಗಿದ್ದು ಮಲೇಶಿಯಾ, ಇಂಡೋನೇಷಿಯಾ ಮತ್ತು ಸುಮಾತ್ರ ದ್ವೀಪಗಳಲ್ಲಿ ಮೆಣಸನ್ನು ಬೆಳೆಯುತ್ತಾರೆ.



ಪ್ರಾಚೀನ ರೋಮನ್ ಮತ್ತು ಗ್ರೀಕ್ ಸಾಮ್ರಾಜ್ಯಗಳು ಭಾರತ ದೇಶದ ಮೆಣಸನ್ನೇ ತಮ್ಮ ಅಡುಗೆಗಳಲ್ಲಿ ಬಳಸುತ್ತಿದ್ದರು. ಭಾರತದಲ್ಲಿ ಅಮೆರಿಕದ ಮೆಣಸಿನಕಾಯಿಯ ಪರಿಚಯಕ್ಕೂ ಮುನ್ನ ಮೆಣಸು ಇಪ್ಪಲಿ ಜೀರಿಗೆ ಅಜ್ವಾನಗಳನ್ನು ಖಾರಕ್ಕೆ ಬಳಸುತ್ತಿದ್ದರು. ಮೆಣಸನ್ನು ಬಳಸುವುದೆ ಒಂದು ಸೋಜಿಗ. ಅದೇನು ಸಿಹಿಯೆ? ಅಥವಾ ನೋಡಲಿಕ್ಕಾದರೂ ಅಂದವೇ? ಇತ್ತ ಹಣ್ಣಲ್ಲ, ಅತ್ತ ಕಾಯಲ್ಲ. ತಿಂದರೆ ಹೊಟ್ಟೆ ತುಂಬುವುದಿಲ್ಲ,ಅದಕ್ಕಿರುವುದೊಂದೇ ಗುಣವೆಂದರೆ ಅದರ ಖಾರ. ಆದರೂ ಆ ರುಚಿಗೆಂದೇ ನಾವು ದೂರದ ಭಾರತದಿಂದಲಾದರೂ ಸರಿ, ತರಿಸಿಕೊಳ್ಳುತ್ತೇವೆ! ಮೆಣಸನ್ನು ಮೊದಲಬಾರಿಗೆ ತಿಂದ ಆ ಮಹಾನುಭಾವನಾದರೂ ಯಾರೋ! ಅಷ್ಟೇಕೆ, ಹಸಿವನ್ನು ಸಹಿಸದೆ ತಿನ್ನಲು ತೊಡಗಿದವನಾದರೂ ಯಾರೋ.... ಎಂದು ವಾರ್ಷಿಕ 5 ಕೋಟಿ ಹಣವನ್ನು ರೋಮ್ ಸಾಮ್ರಾಜ್ಯದಿಂದ ಭಾರತ ಪಡೆಯುತ್ತಿದ್ದುದನ್ನು ನೋಡಿ ಹಿರಿಯ ಚರಿತ್ರಕಾರ ಪ್ಲಿನಿ ದೂರು ಹೇಳುತ್ತಾನೆ ಎಂದರೆ ಮೆಣಸಿನ ಜನಪ್ರಿಯತೆಯ ಕುರಿತು ನೀವು ಊಹಿಸಬಹುದು.

ಈ ಮೆಣಸು ಗಾಳಿಗೊಡ್ಡಿದರೆ ತನ್ನ ಸ್ವಾದ ಹಾಗೂ ಪರಿಮಳವನ್ನು ಕಳೆದುಕೊಳ್ಳುತ್ತದೆಯಾದ್ದರಿಂದ ಶೇಖರಿಸವಾಗ ಗಾಳಿಯಾಡದ ಜಾಗದಲ್ಲಿ ಶೇಖರಿಸಬೇಕು. ಅಂತಹ ವಾತಾವರಣದಲ್ಲಿ ಮೆಣಸು ದೀರ್ಘಕಾಲ ತನ್ನ ಸಾಂಬಾರ ಗುಣಗಳನ್ನು ಉಳಿಸಿಕೊಳ್ಳುತ್ತದೆ. ಮೆಣಸನ್ನು ದೀರ್ಘಕಾಲ ಬೆಳಕಿಗೊಡ್ಡಿದಾಗ ತನ್ನ ಸ್ವಾದಿಷ್ಟತೆಯನ್ನು ಕಳೆದುಕೊಳ್ಳುತ್ತದೆ, ಏಕೆಂದರೆ ಬೆಳಕಿನಲ್ಲಿ ಪೈಪರೈನ್ ಧಾತುವು ರುಚಿಯಿರದ ಇಸೊಚವಿಸಿನ್ ಆಗಿ ಪರಿವರ್ತನೆ ಹೊಂದುತ್ತದೆ. ಒಮ್ಮೆ ಪುಡಿಮಾಡಿದ ನಂತರ ಮೆಣಸಿನ ಸುಗಂಧ ಬಹಳ ಬೇಗನೆ ಆವಿಯಾಗಿ ಹೋಗುತ್ತದೆ ಎಂಬ ಕಾರಣಕ್ಕಾಗಿ ಅನೇಕ ಅಡುಗೆ ವಿಧಾನಗಳಲ್ಲಿ ಮೆಣಸನ್ನು ಪುಡಿ ಮಾಡಿದೊಡನೆಯೇ ಉಪಯೋಗಿಸಲಾಗುತ್ತದೆ. ಅನೇಕ ಬಾರಿ ಚಿಕ್ಕ ಮೆಣಸು ಹುಡಿ ಮಾಡುವ ಕೈ–ಯಂತ್ರವನ್ನು ಮೊದಲೇ ಪುಡಿಮಾಡಿ ಶೇಖರಿಸಿಡುವ ಮೆಣಸಿಗೆ ಬದಲಾಗಿ ಉಪಯೋಗಿಸುತ್ತಾರೆ. 14ನೇ ಶತಮಾನದಿಂದಲೇ ಈ ರೀತಿಯ ಕೈ–ಯಂತ್ರಗಳು ಯೂರೋಪ್ ಹಾಗೂ ಭಾರತದಲ್ಲಿ ಅನೇಕ ಕಡೆ ಪ್ರಚಲಿತವಾಗಿದ್ದು. ಇಂದಿಗೂ ಈ ಯಂತ್ರಗಳು ಬಳಕೆಯಾಗುತ್ತಾ ಬಂದಿವೆ.

ಪ್ರಪಂಚದ ಸಾಂಬಾರ ಪದಾರ್ಥ ವ್ಯಾಪಾರದಲ್ಲಿ ಕರಿಮೆಣಸು ತನ್ನದೇ ಆದ ಛಾಪನ್ನು ಹೊಂದಿದೆ.... ಅದರಲ್ಲೂ ಮಾಂಸಾಹಾರದ ಅಡುಗೆಗೆ ಕರಿಮೆಣಸು ನೀಡುವ ಸ್ವಾದಕ್ಕೆ ಬೇರಾವುದೇ ಖಾರಗಳು ಸರಿಸಾಟಿಯಲ್ಲ ಎಂಬುದು ಇದರ ಗರಿಮೆಯಾಗಿದೆ.

*ಕರಿಮೆಣಸು ಕ್ಯಾಲ್ಸಿಯಂ, ಸೋಡಿಯಂ, ಪೊಟ್ಯಾಶಿಯಂ, ವಿಟಮಿನ್ ಎ ಮತ್ತು ವಿಟಮಿನ್ ಕೆ ಮುಂತಾದ ಖನಿಜಗಳನ್ನು ಹೊಂದಿದ್ದು ಅತ್ಯುತ್ತಮ ಪೋಷಕಾಂಶಗಳ ಅಗರವಾಗಿದೆ. ಕರಿಮೆಣಸು ಅತ್ಯುತ್ತಮ ರೋಗ ನಿರೋಧಕ ಶಕ್ತಿಯನ್ನು ಹೊಂದಿದೆ.

*ದೇಹದ ರಕ್ತದೊತ್ತಡವನ್ನು ಕಡಿಮೆ ಮಾಡುವ ಗುಣವನ್ನು ಕಾಳು ಮೆಣಸು ಹೊಂದಿದೆ ರಕ್ತ ಪರಿಚಲನೆಗೆ ಸಹಾಯಕವಾಗಿ ಕಾರ್ಯ ನಿರ್ವಹಿಸುತ್ತದೆ.

* ಕ್ಯಾನ್ಸರ್ ಚಿಕಿತ್ಸೆಯಲ್ಲಿಯೂ ಕೂಡ ಕರಿಮೆಣಸಿನ ಪೈಪರ್ ಲೈನ್ ಎಂಬ ಅಂಶ ಮತ್ತು ಅರಿಶಿಣದ ಕರ್ಕ್ಯೂಮಿನ್ ಅಂಶಗಳು ಕ್ಯಾನ್ಸರ್ ನಿರೋಧಕ ಗುಣಗಳನ್ನು ಹೊಂದಿದ್ದು ಔಷಧಿಯ ರೂಪದಲ್ಲಿ ಇವುಗಳನ್ನು ಬಳಸಲಾಗುತ್ತದೆ. * ಕರಿ ಮೆಣಸಿನಲ್ಲಿರುವ ಫೈಟೋ ನ್ಯೂಟ್ರಿಯೆಂಟ್ಸ್ ಎಂಬ ಅಂಶವು ತೂಕವನ್ನು ಕಳೆದುಕೊಳ್ಳಲು ಸಹಕಾರಿಯಾಗಿದ್ದು ನಿಗದಿತ ಪ್ರಮಾಣದ ಕರಿಮೆಣಸನ್ನು ಬಳಸುವುದರಿಂದ ತೂಕ ಇಳಿಸಿಕೊಳ್ಳಬಹುದು. ಸರಿಯಾದ ಮಲ ಮೂತ್ರ ವಿಸರ್ಜನೆ,ಬೆವರುಗಳ ಮೂಲಕ ಕಶ್ಮಲಗಳು ಹೊರ ಹೋಗಲು ಕರಿಮೆಣಸಿನಲ್ಲಿರುವ ಅಂಶಗಳು ಸಹಾಯಕಾರಿಯಾಗಿವೆ. * ಆಹಾರದ ಅಜೀರ್ಣ ಸಮಸ್ಯೆಯಿಂದ ಬಳಲುವವರು ಸಣ್ಣ ಪ್ರಮಾಣದ ಕರಿಮೆಣಸಿನ ಅರೆದ ಪುಡಿಯನ್ನು ಮಜ್ಜಿಗೆಯಲ್ಲಿ ಸೇರಿಸಿ ಸೇವಿಸುವುದರಿಂದ ಜೀರ್ಣ ಸಂಬಂಧಿ ಸಮಸ್ಯೆಗಳಿಂದ ಪಾರಾಗಬಹುದು * ಹೊಟ್ಟೆ ಉಬ್ಬರ, ಗ್ಯಾಸ್ಟ್ರಿಕ್ ಸಮಸ್ಯೆಗಳನ್ನು ತೊಡೆಯುವ ಅಂಶವನ್ನು ಹೊಂದಿರುವ ಕಾಳುಮೆಣಸು ವಾತ ಮತ್ತು ಕಫ ದೋಷಗಳನ್ನು ಕೂಡ ನಿವಾರಿಸುತ್ತದೆ. * ಕಾಳು ಮೆಣಸಿನ ಕಷಾಯವನ್ನು ಕುಡಿಸುವ ಮೂಲಕ ಜ್ವರ ಬಾಧೆಯನ್ನು ತಗ್ಗಿಸಬಹುದು. ಕೆಮ್ಮು ನೆಗಡಿ ಕಫ ಮುಂತಾದ ಶೀತ ಸಂಬಂಧಿ ತೊಂದರೆಗಳು ಕೂಡ ಕಾಳು ಮೆಣಸಿನ ಬಳಕೆಯಿಂದ ದೂರವಾಗುತ್ತವೆ. ಅತಿಯಾದರೆ ಅಮೃತವು ವಿಷ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಹಿತಮಿತವಾಗಿ ಕಾಳುಮೆಣಸನ್ನು ಬಳಸಿ ಆರೋಗ್ಯವನ್ನು ಉಳಿಸಿಕೊಳ್ಳಿ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಛಿದ್ರಗೊಂಡಿತೆ ಕನಸು?...



ಛಿದ್ರ ಗೊಂಡಿತೆ ಕಂಡ ಸ್ವಪ್ನವು
ನಿದ್ರೆಗೊಪ್ಪದ ಕಂಗಳು
ಭದ್ರ ತಳಹದಿ ಇರದ ಮನೆಗಳು
ಬಿದ್ದು ಹೋಗದೆ ಉಳಿಯವು

ಶರಧಿ ದಡದಲಿ ಕುಳಿತು ಗೀಚಿದ
ಬರಹವಳಿಸಿತೆ ಅಲೆಗಳು
ಕರವು ಸೋತಿತೆ ಬರೆಯಲಾರದೆ
ಬರಿದೆ ಕುಳಿತವೆ ಕೈಗಳು

ಅಮಿತ ಭರವಸೆ ಇರಿಸಿ ತಪ್ಪಿದೆ
ಗಮನ ನೀಡದೆ ಮೊದಲೊಳು
ಸುಮನವಿಲ್ಲದ ಹೃದಯ ಬಂಧವು
ಕಮಲದೆಲೆಯಲಿ ಹನಿಗಳು

ಕಳೆದ ಬದುಕಿಗೆ ನೊಂದು ಮನದಲಿ
ಕುಳಿತು ಅಳುತಿಹೆ ನೋವಲಿ
ಹಳೆಯದೆಲ್ಲವ ಮರೆತು ಮುನ್ನಡೆ
ಒಳಿತು ಬರುವುದು ಬಾಳಲಿ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಆಸೆ

ಆಸೆಯ ಅಲೆಯ ಮೇಲೆ
ತೇಲುತ ನಡೆದಿಹ ಜಗವು ।
ಆಸೆ ಅತಿಯಾದ ಮೇಲೆ
ವಿನಾಶದಂಚಿಗೆ ಜಗವು ॥

ನಾಡ ಜನಗಳು ಕಡಿದರು ಕಾಡನು
ಉಳಿಮೆ ಮಾಡಿ ಮನೆ ಕಟ್ಟಲು ।
ನಾಡ ಜನಗಳ ಅತಿ ಆಸೆಯಲಿ
ಹಸಿರ ಭುವಿಯಾಯ್ತು ಬೆತ್ತಲು ॥

ಮನುಜರು ಮರೆತರು ಮಾನವೀಯತೆಯ
ದುಡ್ಡಿನಾಸೆಯಲಿ ಮೆರೆದಾಡಲು ।
ಅತಿ ಆಸೆಯ ನೌಕೆಯ ನೆಲೆಯಲಿ
ದುಃಖ ಸಾಗರದ ಕಾರ್ಗತ್ತಲು ॥

ವಿಜ್ಞಾನಿಗಳು ವಿಶ್ವದ ಒಳಿತಿಗೆ
ಅಣುವನ್ವೇಷಣೆ ಮಾಡಿದರು ।
ವಿಶ್ವಸಮರದಲಿ ವಿಜಯದಾಸೆಗೆ
ಅಣುಶಕ್ತಿಯನು ಬಳಸಿದರು ॥

– ಕೆ ಕುಮಾರಸ್ವಾಮಿ
ಶಿಕ್ಷಕರು ಹಾರಕಭಾವಿ

# ಅಂಟಾರ್ಕ್ಟಿಕಾದಲ್ಲಿ ಆಹಾರ ಬೇಯಿಸಿದರೆ...




ಮೊನ್ನೆ ಬೊಮ್ಮಳ್ಳಿಗೆ ಹೋದಾಗ ಆಫಿಸಿನ ಬಳಿ ಸೋಮೇಶ ಸಿಕ್ಕ. ಬಹಳ ದಿನಗಳ ನಂತರ ಭೇಟಿಯಾದ್ದರಿಂದ ಸಾಕಷ್ಟು ಮಾತುಕತೆ, ಹರಟೆ ನಡೆದಿತ್ತು. ಈ ನಡುವೆ ಸಂಜೆಯಾದ್ದರಿಂದ ಒಂದಿಷ್ಟು ಬಾಯಿ ಬಿಸಿ ಮಾಡಿಕೊಳ್ಳಲು ಶೆಟ್ಟಿ ಹೋಟಲಿಗೆ ಹೋದೆವು. ಅಲ್ಲಿ ದೊಡ್ಡದೊಂದು ಬಾಣಲೆಯಲ್ಲಿ ಬಿಸಿ ಬಿಸಿ ಮಿರ್ಚಿ ಬೊಂಡಾಗಳು ರೆಡಿಯಾಗುತ್ತಿದ್ದವು. ಎರಡು ಪ್ಲೇಟ್ ಮಿರ್ಚಿಗೆ ಆರ್ಡರ್ ಮಾಡಿದೆವು. ಮಾಣಿ ಒಂದು ಪೇಪರಲ್ಲಿ ಒಂದಿಷ್ಟು ಹಳದಿ ಮಂಡಕ್ಕಿ ಹಾಗೂ ಎರಡೆರಡು ಮಿರ್ಚಿ ತಂದಿಟ್ಟ. ನಾನು ಉಫ್, ಉಫ್ ಎಂದು ಬಿಸಿ ಮಿರ್ಚಿಯನ್ನು ಊದಿ ಊದಿ ಆರಿಸುತ್ತಿದ್ದೆ. ಅಷ್ಟರಲ್ಲಾಗಲೇ ಸೋಮೇಶ ಒಂದು ಮಿರ್ಚಿಯನ್ನು ತಿಂದು ಎರಡನೆ ಮಿರ್ಚಿಗೆ ಕೈಹಾಕಿದ. 'ಇದೇನಿದು ಇಷ್ಟೊಂದು ಬಿಸಿ ಮಿರ್ಚಿಯನ್ನು ಅದ್ಹೇಗೆ ತಿಂದೆ ಮಾರಾಯ' ಎಂದೆ. "ಮಿರ್ಚಿನ ಬಿಸಿ ಇರುವಾಗ್ಲೆ ತಿನ್ಬೇಕು. ಅಂದ್ರ ಮಾತ್ರ ಅದ್ರ ರುಚಿ ಮತ್ತು ಖಾರ ನೆತ್ತಿಗೆ ಹತ್ತುತ್ತದೆ. ಆಗ ಮಾತ್ರ ಮಿರ್ಚಿ ತಿಂದಂಗ ಆಗುತ್ತೆ" ಅಂದ. 'ಇಷ್ಟೊಂದು ಬಿಸಿಯಾದದ್ದನ್ನು ತಿನ್ನೋ ನಿನ್ನನ್ನು ಅಂಟಾರ್ಕ್ಟಿಕಾಕ್ಕೆ ಕಳಿಸಿದ್ರ ಹೆಂಗ' ಅಂದೆ. "ಏಯ್ ಅದೇನಾಕ್ಕೈತಿ. ಅಲ್ಲೂ ಹಿಂಗ ಬಿಸಿಬಿಸಿಯಾಗಿರದನ್ನ ತಿನ್ನಾದು" ಎಂದ. ಇದಕ್ಕೆ ನೀವೇನಂತಿರಿ. ಇದ್ರ ಬಗ್ಗೆ ಆಮ್ಯಾಲೆ ಹೇಳುವಿರಂತೆ. ಈಗ ಕೆಳಗಿನ ಅಂಶಗಳನ್ನ ಒಮ್ಮೆ ಓದಿ.

ನಮಗೆಲ್ಲಾ ತಿಳಿದಂತೆ ಅಂಟಾರ್ಕ್ಟಿಕಾ ಭೂಮಿಯ ಮೇಲಿನ ಅತ್ಯಂತ ತಂಪಾದ ಪ್ರದೇಶ ಸ್ಥಳ. ಇಲ್ಲಿ ಮಾನವರ ವಾಸ ತೀರಾ ವಿರಳ. ಅಲ್ಲದೇ ಪ್ರಾಣಿಗಳೂ ಸಹ ವಿರಳ. ಪೆಂಗ್ವಿನ್‌ನಂತಹ ಕೆಲವು ಶೀತ ಪ್ರಾಣಿಗಳು ಮಾತ್ರ ಇಲ್ಲಿ ಬದುಕುತ್ತವೆ. ಇಲ್ಲಿ ಅತ್ಯಂತ ಶೀತ ತಾಪಮಾನ –1290 ಫ್ಯಾರನ್‌ಹೀಟ್(–890 ಸೆಲ್ಸಿಯಸ್). ಅಂಟಾರ್ಕ್ಟಿಕಾದಲ್ಲಿ ಕಡಿಮೆ ತೇವಾಂಶವಿದೆ. ಆದ್ದರಿಂದ ಇದನ್ನು ವಿಶ್ವದ ಅತ್ಯಂತ ಒಣ ಸ್ಥಳಗಳಲ್ಲಿ ಒಂದು ಪರಿಗಣಿಸಲಾಗಿದೆ.

ಅಂಟಾರ್ಕ್ಟಿಕಾದಲ್ಲಿ ಜನವಸತಿ ಇಲ್ಲ, ಪ್ರಾಣಿಗಳೂ ಇಲ್ಲ. ಆದಾಗ್ಯೂ ವಿಜ್ಞಾನಿಗಳ ಪಾಲಿಗೆ ಇದೊಂದು ಸ್ವರ್ಗ. ಕನಸಿನ ಮನೆ. ಅಧ್ಯಯನ ಮಾಡಲು ಜಗತ್ತಿನ ಮೂಲೆ ಮೂಲೆಗಳಿಂದ ವಿಜ್ಞಾನಿಗಳು ಇಲ್ಲಿಗೆ ಬರುತ್ತಾರೆ. ಇಲ್ಲಿ ವರ್ಷಕ್ಕೆ ಒಮ್ಮೆ ಮಾತ್ರ ಸೂರ್ಯ ಉದಯಿಸುತ್ತಾನೆ ಮತ್ತು ಅಸ್ತಮಿಸುತ್ತಾನೆ. ಆರು ತಿಂಗಳು ಹಗಲು ಮತ್ತು ಇನ್ನಾರು ತಿಂಗಳು ರಾತ್ರಿ. ಚಳಿಗಾಲದಲ್ಲಿ ಸೂರ್ಯನ ಶಾಖವಿಲ್ಲ. ದೇಹ ಬೆಚ್ಚಗಿಡಲು ಬೆಂಕಿ ಮತ್ತು ಉಣ್ಣೆ ಸ್ವೆಟರ್, ಕೈಗವಸು, ಸಾಕ್ಸ್‌ನಂತಹ ಪರಿಕರಗಳು ಬೇಕೇ ಬೇಕು. ಇಲ್ಲಿಗೆ ಬಂದ ವಿಜ್ಞಾನಿಗಳಲ್ಲಿ ಕೆಲವರು ವರ್ಷ ಪೂರ್ತಿ ವಾಸವಾಗುತ್ತಾರೆ. ಇನ್ನು ಕೆಲವರು ಆರು ತಿಂಗಳು ಮಾತ್ರ ವಾಸಿಸುತ್ತಾರೆ.

ಹಾಗಾದರೆ ವಿಜ್ಞಾನಿಗಳು ಆಹಾರಕ್ಕೆ ಏನು ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇಲ್ಲಿನ ವಿಪರೀತ ಚಳಿಯಲ್ಲೂ ಹೇಗೆ ಆಹಾರ ಬೇಯಿಸಿಕೊಂಡು ತಿನ್ನುತ್ತಾರೆ ಎಂಬುದೇ ಈ ಕ್ಷಣದ ಚರ್ಚೆಯ ವಿಷಯ. ಬನ್ನಿ ಅಂಟಾರ್ಕ್ಟಿಕಾದಲ್ಲಿ ಹೇಗೆ ಆಹಾರ ಬೇಯಿಸಿಕೊಂಡು ತಿನ್ನುತ್ತಾರೆ ಎಂಬುದರ ಕುರಿತು ಚರ್ಚಿಸೋಣ.

ಅಂಟಾರ್ಕ್ಟಿಕಾ ನಿರ್ಜನ ಪ್ರದೇಶವಾದರೂ ಇಲ್ಲಿ ಬೇರೆ ಬೇರೆ ರಾಷ್ಟ್ರಗಳಿಂದ ಅಧ್ಯಯನಕ್ಕೆಂದು ಬಂದ ವಿಜ್ಞಾನಿಗಳಿದ್ದಾರೆ. ಅದಕ್ಕೆಂದೇ ಮೆಕ್ಮುರ್ಡೊದಲ್ಲಿ ಒಂದು ಸಂಶೋಧನಾಲಯ ಕೇಂದ್ರವೂ ಸಹ ಇಲ್ಲಿದೆ. ಖಗೋಳವಿಜ್ಞಾನ, ಹವಾಮಾನ ವಿಜ್ಞಾನ, ಜೀವಶಾಸ್ತ್ರ, ಭೂವಿಜ್ಞಾನ, ಪರಿಸರ ವಿಜ್ಞಾನ, ಸಾಗರ ಜೀವಶಾಸ್ತ್ರ, ಸಮುದ್ರಶಾಸ್ತ್ರ, ಮುಂತಾದ ವಿಭಾಗಳಿದ್ದು ಹೊಸ ಹೊಸ ಅಧ್ಯಯನಗಳು ನಡೆಯುತ್ತಲೇ ಇರುತ್ತವೆ. ಮೆಕ್ಮುರ್ಡೊದಲ್ಲಿ ಸಂಶೋಧನಾ ಕೇಂದ್ರವಿದ್ದು, ಒಂದು ಸಾವಿರ ಜನರು ವಾಸಿಸಬಹುದಾದಷ್ಟು ವಿಶಾಲವಾಗಿದೆ. ಈ ಕೇಂದ್ರದಲ್ಲಿ ಅಡುಗೆಯವರು ಸೇರಿದಂತೆ ಸೈನಿಕರೂ ಇದ್ದಾರೆ. ಇಲ್ಲಿಗೆ ಹೋಗಲು ಸುಸಜ್ಜಿತವಾದ ಹರ್ಬರ್ ಮತ್ತು ಹೆಲಿಪ್ಯಾಡ್ ಇದೆ.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಹಣ್ಣು, ತರಕಾರಿ ಹಾಗೂ ಇನ್ನಿತರೇ ತಾಜಾ ಆಹಾರ ಇಲ್ಲಿ ವಿರಳ. ಏಕೆಂದರೆ ನಾಗರಿಕ ವಿಮಾನಯಾನ ಇಲ್ಲಿಲ್ಲ. ಕೇವಲ ಸರಕು ವಿಮಾನಗಳು ಮಾತ್ರ ಸಂಚರಿಸುತ್ತವೆ. ನಾಗರಿಕ ವಿಮಾನಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿ ಮಾತ್ರ ಸಂಚರಿಸುತ್ತವೆ. ಹಾಗಾಗಿ ತಾಜಾ ಆಹಾರ ಇಲ್ಲಿ ದುರ್ಲಭ. ಇಲ್ಲಿ ಒಣ ಮೀನು, ಹೆಪ್ಪುಗಟ್ಟಿಸಿದ ತರಕಾರಿ ಮತ್ತು ಸಂಸ್ಕರಿತ ಮಾಂಸ ಮಾತ್ರ ದೊರೆಯುತ್ತದೆ. ಮೊಸಳೆ ಮತ್ತು ಕಾಂಗರೂನಂತಹ ಕೆಲವು ವಿಲಕ್ಷಣ ಮಾಂಸವು ಅಪರೂಪದ ಸಂದರ್ಭಗಳಲ್ಲಿ ಮಾತ್ರ ದೊರೆಯುತ್ತದೆ. ಇನ್‌ಸ್ಟಂಟ್ ನ್ಯೂಡಲ್ಸ್ ಮತ್ತು ಡ್ರೈಫ್ರೂಟ್ಸ್ ಮಾತ್ರ ಇಲ್ಲಿನವರಿಗೆ ವಿಫುಲ ಆಹಾರ.

ಅಂಟಾರ್ಕ್ಟಿಕಾದ ಬಯಲಲ್ಲಿ ಆಹಾರ ಬೇಯಿಸಲು ಸಾಧ್ಯವೇ? ಎಂಬ ಪ್ರಶ್ನೆ ಮೂಡದೇ ಇರದು. ಹೌದು ಇಂತದ್ದೊಂದು ಪ್ರಯತ್ನಕ್ಕೆ ಇಲ್ಲಿ ಅವಕಾಶವೇ ಇಲ್ಲ. ಏಕೆಂದರೆ ಹೊರಗಿನ ತಾಪಮಾನ –940 ಫ್ಯಾರನ್‌ಹೀಟ್ ಇರುವಾಗ ಒಲೆ ಹಚ್ಚಿ ಆಹಾರ ಬೇಯಿಸಲು ಸಾಧ್ಯವಾದೀತೆ. ಬಯಲಲ್ಲಿ ಆಹಾರ ಬೇಯಿಸುವಂತಹ ಸಾಹಸಕ್ಕೆ ಅಲ್ಲಿನ ಬಾಣಸಿಗರು ಕೈಹಾಕಿ ಸೋತಿದ್ದಾರೆ. ಅವರು ಮಾಡಿದ ಅನೇಕ ಪ್ರಯತ್ನಗಳೆಲ್ಲವೂ ವಿಫಲವಾಗಿವೆ. ಮೊದಲೇ ಇದು ತುಂಬಾ ಶೀತಪ್ರದೇಶ. ಆಹಾರದ ಯಾವುದೇ ದ್ರವ ಘಟಕ ತ್ವರಿತವಾಗಿ ಘನೀಕೃತವಾಗುತ್ತದೆ. ಬೆಳಕಿನ ವೇಗದ ಶಾಖದಿಂದಲೂ ಸಹ ಇಲ್ಲಿ ಏನನ್ನೂ ಬೇಯಿಸಲಾಗುದಿಲ್ಲವಂತೆ. ಅಬ್ಬಬ್ಬಾ!. ಆದರೆ ಇಲ್ಲಿ ಒಂದು ಅವಕಾಶವಿದೆ. ಎಂತಹ ಆಹಾರವನ್ನೂ ಕೊಳೆಯದೆ ಹಾಗೆ ಸಂರಕ್ಷಿಸಬಹುದು. ಇತರೆ ಕಡೆಗಳಲ್ಲಾದರೆ ಅಳಿದುಳಿದ ಆಹಾರವನ್ನು ತಟ್ಟೆಯಲ್ಲಿ ಬಿಟ್ಟು ಕೈತೊಳೆಯುವುದು ಸಹಜ. ಹೋಟೆಲ್, ಚೌಲ್ಟ್ರಿಗಳಲ್ಲಿ ಸಾಕಷ್ಟು ಆಹಾರವನ್ನು ಚೆಲ್ಲುವುದೇ ಒಂದು ಫ್ಯಾಷನ್ ಆಗಿಬಿಟ್ಟಿದೆ. ಆದರೆ ಅಂಟಾರ್ಕ್ಟಿಟಿಕಾದಲ್ಲಿ ಅಳಿದುಳಿದ ಆಹಾರವನ್ನು ಸುಲಭವಾಗಿ ಹಿಮದಲ್ಲಿ ಹೂತಿಟ್ಟು ಸಂರಕ್ಷಿಸಬಹುದು.

**ವಿಭಿನ್ನ ಹಾಗೂ ವಿಫಲ ಪ್ರಯತ್ನಗಳು :**

ಖಗೋಳ ಜೀವವಿಜ್ಞಾನಿ ಸೈಪ್ರಿಯನ್ ವರ್ಸುಯಕ್ಸ್ ಅವರು ಬ್ರೆಡ್ಡಿನ ತುಂಡಿನ ಮೇಲೆ ಜೇನು ತುಪ್ಪ ಸುರಿಯಲು ಮಾಡಿದ ಪ್ರಯತ್ನವೊಂದು ವಿಫಲವಾಯಿತು. ಅವರು ಬ್ರೆಡ್ಡಿನ ಮೇಲೆ ಜೇನುತುಪ್ಪ ಸುರಿಯಲು ಪ್ರಾರಂಭಿಸುತ್ತಿದ್ದಂತೆ ಎರಡೂ ವಸ್ತುಗಳು ಕ್ಷಣಾರ್ಧದಲ್ಲಿ ಹೆಪ್ಪುಗಟ್ಟಿದವು. ಇದು ನಂಬಲಸಾಧ್ಯವಾದರೂ ಸತ್ಯ. ಬಾಟಲಿಯಿಂದ ಜೇನು ಹೊರಬರುತ್ತಿದ್ದಂತೆ ವಾತಾವರಣದ ತಂಪಿನಿಂದ ಹೆಪ್ಪುಗಟ್ಟತೊಡಗಿತು ಎನ್ನುತ್ತಾರೆ ಸೈಪ್ರಿಯನ್ ವರ್ಸುಯಕ್ಸ್.

ಅಂತೆಯೇ ಅಲ್ಲಿ ಬೆಣ್ಣೆಯನ್ನು ಕರಗಿಸಲೂ ಸಹ ಸಾಧ್ಯವಿಲ್ಲ ಎನ್ನುತ್ತಾರೆ. ಶಾಖದಿಂದ ಬೆಣ್ಣೆಯನ್ನು ಕರಗಿಸಿ ತುಪ್ಪ ಮಾಡಿದರೆ ಪುನಹ ಅದನ್ನು ಇನ್ನೊಂದು ಪಾತ್ರೆಗೆ ಸುರಿಯುವ ವೇಳೆಯಲ್ಲಿಯೇ ಅದು ಘನೀಭವಿಸ ತೊಡಗುತ್ತದೆ. ಹಾಗಾಗಿ ಅದನ್ನು ದ್ರವರೂಪದಲ್ಲಿ ಸಂಗ್ರಹಿಸಲು ಸಾಧ್ಯವಿಲ್ಲ.

ಅಂಟಾರ್ಕ್ಟಿಕಾದಲ್ಲಿ ಹಸಿ ಮೊಟ್ಟೆಯನ್ನು ತಿನ್ನಲು ಸಾಧ್ಯವಿಲ್ಲ. ಮೊಟ್ಟೆಯ ಚಿಪ್ಪು ಸೀಳುತ್ತಿದ್ದಂತೆ ವಾತಾವರಣದ ತಂಪಿನಿಂದ ಘನೀಭವಿಸುತ್ತದೆ. ಹಾಗೆಯೇ ಸ್ಪಾಗೆಟ್ಟಿ(ಶಾವಿಗೆ/ನ್ಯೂಡಲ್ಸ್‌ನಂತಹ ಖಾದ್ಯ)ಯನ್ನೂ ಸಹ ಹೊರಾಂಗಣದಲ್ಲಿ ತಿನ್ನಲು ಸಾಧ್ಯವಾಗುವುದಿಲ್ಲ. ಅಷ್ಟೇ ಅಲ್ಲ ಕುದಿಯುತ್ತಿರುವ ನೀರನ್ನು ಧಾರಕದಿಂದ ಇನ್ನೊಂದಕ್ಕೆ ಸುರಿಯುತ್ತಿದ್ದಂತೆ ವಾತಾವರಣದಲ್ಲೇ ಆವಿಯಾಗತೊಡಗುತ್ತದೆ. ಇದರ ಅನೇಕ ವಿಡಿಯೋಗಳು ಯೂಟ್ಯೂಬ್‌ನಲ್ಲಿ ಲಭ್ಯ ಇವೆ. ಕೇವಲ ಆಹಾರ ನೀರು ಮಾತ್ರವಲ್ಲ, ನೀರನ ಗುಳ್ಳೆಗಳೂ ಸಹ ಗಾಳಿಯಲ್ಲೆ ಹೆಪ್ಪುಗಟ್ಟುತ್ತವೆ. ಕೆಲವು ಗುಳ್ಳೆಗಳು ಘನೀಭವಿಸಿ ಮಂಜುಗಡ್ಡೆ ಚೂರುಗಳಾಗಿ ಸಿಡಿಯುತ್ತವೆ. ಮಂಜುಗಡ್ಡೆ ಗುಳ್ಳೆಗಳನ್ನು ಬಾಟಲಿ ಅಥವಾ ಗಾಜಿನ ವಸ್ತುಗಳಲ್ಲಿ ಸಂಗ್ರಹಿಸಿ ಅಲಂಕಾರಕ್ಕಾಗಿ ಬಳಸುವುದೂ ಉಂಟು. ಹಾಗಾಗಿ ಅಂಟಾರ್ಕ್ಟಿಕಾದಲ್ಲಿ ಏನಿದ್ದರೂ ಒಣ ಆಹಾರವೇ ಗತಿ ಅಲ್ಲವೇ? ನಮ್ಮಲ್ಲಿನಂತೆ ತೋಟದಲ್ಲಿ ಊಟ, ಹೊರಾಂಗಣ ಭೋಜನ ಮುಂತಾದವುಗಳಿಗೆ ಅಲ್ಲಿ ಅವಕಾಶವೇ ಇಲ್ಲ. ಅಲ್ಲೇನಿದ್ದರೂ ಬೆಂಕಿಯಿಂದ ಬಾಣಲೆಗೆ, ಬಾಣಲೆಯಿಂದ ಬಾಯಿಗೆ ಹೋದರೆ ಮಾತ್ರ ಬಿಸಿ ಆಹಾರ, ಇಲ್ಲದಿದ್ದರೆ ತಣ್ಣಗಾದ ಆಹಾರವೇ ಗತಿ ಅಲ್ಲವೇ?

# ಸಣ್ಣ ನೀರಾವರಿ ಇಲಾಖೆಯ ಎಲ್ಲಾ ಗುತ್ತಿಗೆದಾರರಿಗೆ ಹಣ ಬಿಡುಗಡೆಮಾಡಲಾಗಿದೆ:ಸಚಿವಎನ್.ಎಸ್.ಭೋಸರಾಜು

**ಹಂಪಿ ಟೈಮ್ಸ್ ಬೆಂಗಳೂರು**

ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಇಲಾಖೆಯಲ್ಲಿನ ಕಾಮಾಗಾರಿಗಳಿಗೆ ಹಾಗೂ ಗುತ್ತಿಗೆದಾರರರಿಗೆ ಪಾರದರ್ಶಕವಾಗಿ ಹಣ ಬಿಡುಗಡೆ ಮಾಡಲಾಗಿದೆ. ಅನುದಾನ ಬಿಡುಗಡೆಗೆ ಮೊದಲ ಬಾರಿಗೆ ಹೊಸ ಪ್ರಯತ್ನ ಮಾಡಲಾಗಿದ್ದು, ಕಳೆದ ಎರಡು ಆರ್ಥಿಕ ವರ್ಷದಲ್ಲಿ 1566 ಕಾಮಗಾರಿಗಳಿಗೆ ಸಂಪೂರ್ಣ ಬಾಕಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಇಲಾಖೆ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಎಲ್ಲಾ ಕಾಮಗಾರಿ/ಗುತ್ತಿಗೆದಾರರಿಗೂ ಹಣ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ತಾರತಮ್ಯ ಹಾಗೂ ಹಸ್ತಕ್ಷೇಪ ಹೇಗೆ ಸಾಧ್ಯ? ಈ ನಿಟ್ಟಿನಲ್ಲಿ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಆಧಾರ ರಹಿತ ಆರೋಪ ಮಾಡಿದ್ದಾರೆ. ನಿನ್ನೆ ನಡೆದ ಸಭೆಯಲ್ಲಿ, ರಾಜ್ಯ ಗುತ್ತಿಗೆದಾರರಲ್ಲಿ ಉಂಟಾಗಿದ್ದ ಗೊಂದಲಗಳನ್ನು ಪರಿಹರಿಸಲಾಗಿದೆ ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್ ಎಸ್ ಭೋಸರಾಜು ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ವಿವರ ನೀಡಿದ ಅವರು, ಗುರುವಾರ ರಾಜ್ಯ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿ ವಿವರಿಸಲಾಗಿದೆ.

**2023– 24 ನೇ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಅನುದಾನದ ವಿವರ:**

2023–24 ನೇ ಆರ್ಥಿಕ ವರ್ಷದಲ್ಲಿ ನಾವು ಬಿಜೆಪಿ ಸರಕಾರ, ಹಣಕಾಸಿನ ಲಭ್ಯತೆ ಇಲ್ಲದೇ ಇದ್ದರೂ ಪ್ರಾರಂಭಿಸಿದ್ದ, 12,693 ಕೋಟಿ ರೂಪಾಯಿ ಮೌಲ್ಯದ 15,549 ಕಾಮಾಗಾರಿಗಳನ್ನು ಮುಂದುವರೆಸಿದ್ದೇವೆ. ಈ ವರ್ಷದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸದೆ, ಹಳೆಯ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿದ್ದೇವೆ.



ಬಿಜೆಪಿ ಸರಕಾರ ಬಿಟ್ಟು ಹೋಗಿದ್ದ ಅಗಾಧ ಪ್ರಮಾಣದ ಕಾಮಗಾರಿಗಳನ್ನು ನಿಭಾಯಿಸಲು ಹಾಗೂ ಹಣಕಾಸಿನ ಲಭ್ಯತೆ ಇಲ್ಲದೇ ತೊಂದರೆ ಅನುಭವಿಸುತ್ತಿದ್ದ ಗುತ್ತಿಗೆದಾರರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ, ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮಾಡಿಕೊಂಡ ಮನವಿಯ ಮೇರೆಗೆ ನಮ್ಮ ಇಲಾಖೆಗೆ ಹೆಚ್ಚಿನ ಅನುದಾನ ಮಂಜೂರು ಮಾಡಲಾಯಿತು.

ಹಿಂದಿನ ಸರಕಾರ ಹಣಕಾಸಿನ ಲಭ್ಯತೆಯನ್ನು ತೋರಿಸದೇ, ಅವೈಜ್ಞಾನಿಕವಾಗಿ ಅನುಮತಿ ನೀಡಲಾಗಿದ್ದ ಕಾಮಗಾರಿಗಳನ್ನು ಮುಂದುವರೆಸಲು ಹಾಗೂ ತೊಂದರೆಯಲ್ಲಿದ್ದ ಗುತ್ತಿಗೆದಾರರನ್ನು. ಕಾಪಾಡುವ ನಿಟ್ಟಿನಲ್ಲಿ 2000 ಗುತ್ತಿಗೆದಾರರಲ್ಲಿ, 639 ಗುತ್ತಿಗೆದಾರರಿಗೆ ಬಾಕಿ ಇದ್ದ ಸಂಪೂರ್ಣ ಹಣವನ್ನು ಬಿಡುಗೆಡೆ ಮಾಡಲಾಗಿದೆ. ಉಳಿದ 1361 ಗುತ್ತಿಗೆದಾರರಿಗೆ ಭಾಗಶಃ ಹಣವನ್ನು ಬಿಡುಗಡೆ ಮಾಡಲಾಗಿದೆ.

ಪ್ರತಿಯೊಬ್ಬ ಗುತ್ತಿಗೆದಾರರಿಗೂ ಹಣ ಬಿಡುಗಡೆ ಮಾಡಲಾಗಿದ್ದು, ಇದರಲ್ಲಿ ತಾರತಮ್ಯ ಹಾಗೂ ಹಸ್ತಕ್ಷೇಪದ ಪ್ರಶ್ನೆ ಎಲ್ಲಿಂದ ಸಾಧ್ಯ ಎನ್ನುವುದರ ಬಗ್ಗೆ ಗುತ್ತಿಗೆದಾರರನ್ನು ಪ್ರಶ್ನಿಸಿದ್ದಾಗಿ ಸಚಿವರು ತಿಳಿಸಿದರು.

**2024–25 ನೇ ಆರ್ಥಿಕ ವರ್ಷದಲ್ಲಿ ಅನುದಾನ ಬಿಡುಗಡೆ:**

2024–25 ನೇ ಆರ್ಥಿಕ ವರ್ಷದಲ್ಲಿ 9,974.34 ಕೋಟಿ ರೂಪಾಯಿ ಮೌಲ್ಯದ 13,913 ಸ್ಪಿಲ್ ಓವರ್ (ಮುಂದುವರೆದ) ಕಾಮಗಾರಿಗಳು* ಚಾಲ್ತಿಯಲ್ಲಿದ್ದವು. ಕಾಮಗಾರಿಗಳ ಅಗಾಧದತೆ ಹಾಗೂ ಗುತ್ತಿಗೆದಾರರ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು. ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಹೆಚ್ಚುವರಿ ಅನುದಾನ ಮಂಜೂರಾಯಿತು.

ಫೆಬ್ರವರಿ 2025 ಕ್ಕೆ ಬಾಕಿಯಿದ್ದ ಬಿಲ್ ಹಣ 3,352.06 ಕೋಟಿ ರೂಪಾಯಿಗಳು. ಒಟ್ಟಾರೆಯಾಗಿ ಕೈಗೊಳ್ಳಲಾಗಿದ್ದ ಕಾಮಗಾರಿಗಳು 3,176 ಇದರಲ್ಲಿ 267 ಗುತ್ತಿಗೆದಾರರಿಗೆ ಬಾಕಿಯಿದ್ದ ಸಂಪೂರ್ಣ ಹಣವನ್ನು ಡಿಸೆಂಬರ್ ತಿಂಗಳಲ್ಲಿ ಬಿಡುಗಡೆ ಮಾಡಲಾಯಿತು.

ಲಭ್ಯವಿದ್ದ ಅನುದಾನದಲ್ಲಿ 2,909 ಕಾಮಾಗಾರಿಗಳಿಗೆ ಭಾಗಶಃ ಹಣ ಬಿಡುಗಡೆ ಮಾಡಲಾಗಿದೆ. ಒಟ್ಟಾರೆಯಾಗಿ 3,176 ಕಾಮಗಾರಿಗಳಿಗೆ ಪಾರದರ್ಶಕವಾಗಿ ಹಣ ಬಿಡುಗಡೆ ಮಾಡಲಾಗಿದೆ.

**ಮಾರ್ಚ್ 2025 ರಲ್ಲಿ ಬಿಡುಗಡೆಯಾದ ಹಣಕಾಸಿನ ವಿವರ:**

ಒಟ್ಟಾರೆಯಾಗಿ 2637 (211 ಗುತ್ತಿಗೆದಾರರು ಹಾಗೂ 2426 ಕಾಮಗಾರಿ) ಕೆಲಸಗಳಿಗೆ ಹಣ ಬಿಡುಗಡೆ ಮಾಡಲಾಗಿದೆ. ಇದರಲ್ಲಿ 660 (603 ಕಾಮಗಾರಿ ಹಾಗೂ 57 ಗುತ್ತಿಗೆದಾರರಿಗೆ) ಬಾಕಿಯಿದ್ದ ಸಂಪೂರ್ಣ ಹಣವನ್ನು ಬಿಡುಗಡೆ ಮಾಡಲಾಗಿದೆ. 1977 (1823 ಕಾಮಗಾರಿ ಹಾಗೂ 154 ಗುತ್ತಿಗೆದಾರರಿಗೆ) ಭಾಗಶಃ ಹಣ ಬಿಡುಗಡೆ ಮಾಡಲಾಗಿದೆ. 2637 ಕಾಮಾಗಾರಿಗಳಿಗೂ ಹಣ ಬಿಡುಗಡೆ ಮಾಡಲಾಗಿದೆ.

**ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರಿಗೆ ಹೆಚ್ಚಿನ ಆದ್ಯತೆ:**


ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರು ಹೆಚ್ಚಾಗಿ ಕಾಮಗಾರಿಗಳನ್ನ ಕೈಗೊಳ್ಳುವಂತಹ ಎಂಓಟಿ (ಕೆರೆಗಳ ಅಧುನಿಕರಣ) ಮತ್ತು ಏಪಿಬಿಯ ಹೆಡ್ ಆಫ್ ಅಕೌಂಟ್ಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಎಂಓಟಿ (ಕೆರೆಗಳ ಅಧುನಿಕರಣ) ಲೆಕ್ಕಶೀರ್ಷಿಕೆಗೆ ಆಯವ್ಯದಲ್ಲಿ ಹಂಚಿಕೆ ಮಾಡಲಾದ ಹಣ 100 ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ 210 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಲಾಗಿದೆ.

ಏಪಿಬಿ (ಅಣೆಕಟ್ಟು ಪಿಕಪ್) ಲೆಕ್ಕಶೀರ್ಷಿಕೆಗೆ ಆಯವ್ಯಯದಲ್ಲಿ ಹಂಚಿಕೆ ಮಾಡಲಾದ ಹಣ 120 ಕೋಟಿ ರೂಪಾಯಿಗಳು ಹೆಚ್ಚುವರಿಯಾಗಿ 335 ಕೋಟಿ ರೂಪಾಯಿಗಳ ಹಣವನ್ನು ಬಿಡುಗಡೆ ಮಾಡಲಾಗಿದೆ.

ಎಲ್‌ಐಎಸ್ – ಏತನೀರಾವರಿ ಲೆಕ್ಕಶೀರ್ಷಿಕೆಗೆ ಆಯವ್ಯಯದಲ್ಲಿ 650 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದ್ದು, ಹೆಚ್ಚುವರಿಯಾಗಿ 252.50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

ಪಶ್ಚಿಮವಾಹಿನಿ ಲೆಕ್ಕಶೀರ್ಷಿಕೆಗೆ ಆಯವ್ಯಯದಲ್ಲಿ 100 ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದ್ದು, ಹೆಚ್ಚುವರಿಯಾಗಿ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇದನ್ನ ಗಮನಿಸಿದರೆ, ಸಣ್ಣ ಹಾಗೂ ಮಧ್ಯಮ ಗುತ್ತಿಗೆದಾರರು >>4




## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**19–04–2025 – ಶನಿವಾರ**

| | |
|---|---|
| ತಿಥಿ | : ಷಷ್ಠಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೂಲ |
| ಯೋಗ | : ಶಿವ |
| ಕರಣ | : ವಾಣಿಜ |
| ಸೂರ್ಯೋದಯ | : 06:04:07 |
| ಸೂರ್ಯಾಸ್ತ | : 18:48:12 |
| ರಾಹು ಕಾಲ | : 09:15–10:51 |
| ಯಮಘಂಡ ಕಾಲ | : 14:02–15:37 |
| ಗುಳಿಕ ಕಾಲ | : 06:04–07:40 |



## ತುಂಗಭದ್ರಾ ನೀರಿನ ಮಟ್ಟ

ಶುಕ್ರವಾರ : 18–04–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.54 ಅಡಿ |
| ಒಳ ಹರಿವು | 396 ಕ್ಯುಸೆಕ್ |
| ಹೊರ ಹರಿವು | 353 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.030 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1578.74 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 112 ಕ್ಯುಸೆಕ್ |
| ಸಾಮರ್ಥ್ಯ | 3.890 ಟಿಎಂಸಿ |

# ಮಡಿವಾಳ ಸಮುದಾಯದ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಬದ್ಧ : ಸಿಎಂ

### ವಿದ್ಯಾಸಿರಿ ಯೋಜನೆಯ ಮೊತ್ತ ಎರಡು ಸಾವಿರ ರೂಪಾಯಿಗೆ ಹೆಚ್ಚಳ : ಸಿಎಂ ಸಿದ್ದರಾಮಯ್ಯ ಘೋಷಣೆ



■ **ಹಂಪಿ ಟೈಮ್ಸ್ ಬೆಂಗಳೂರು**

ಮಡಿವಾಳ ಸಮುದಾಯದ ಪ್ರಗತಿಗೆ ಕಾಂಗ್ರೆಸ್ ಸರ್ಕಾರ ಬದ್ಧವಾಗಿದೆ: ಮುಖ್ಯವಾಹಿನಿಗೆ ಬರುವ ಪ್ರಯತ್ನ ನಿಮ್ಮಿಂದ ಹೆಚ್ಚೆಚ್ಚು ಆಗಬೇಕು. ಈ ಕಾರಣಕ್ಕೇ ವಿದ್ಯಾಸಿರಿ ಯೋಜನೆಯ ಮೊತ್ತವನ್ನು ಎರಡು ಸಾವಿರ ರೂಪಾಯಿಗೆ ಹೆಚ್ಚಳ ಮಾಡ್ತೀನಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಹತ್ವದ ಘೋಷಣೆ ಮಾಡಿದರು.

ಕೆಂಗೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಿದೇವ ಕನ್ವೆಷ್ನನ್ ಹಾಲ್ ಲೋಕಾರ್ಪಣೆಗೊಳಿಸಿ ಮಾತನಾಡಿದರು.

ಮಡಿವಾಳ ಮತ್ತು ಹಿಂದುಳಿದ ಸಮುದಾಯದ ಮಕ್ಕಳು ಶಿಕ್ಷಣವಂತರಾಗಬೇಕು. ಇದಕ್ಕೇ ವಿದ್ಯಾಸಿರಿ ಮೊತ್ತವನ್ನು ಪ್ರತೀ ವಿದ್ಯಾರ್ಥಿಗೆ ಒಂದೂವರೆ ಸಾವಿರದಿಂದ ಎರಡು ಸಾವಿರ ರೂಪಾಯಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಿದರು.

12ನೇ ಶತಮಾನದಲ್ಲೇ ಮಡಿವಾಳ ಮಾಚಿದೇವರು ಬಸವಣ್ಣನವರ ಜೊತೆ ಸೇರಿ ಸಮಾಜದ ಬದಲಾವಣೆಗೆ ಮುಂದಾಗಿದ್ದರು. ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆ ಕಾರಣಕ್ಕೆ ಅಸಮಾನತೆ ಇದೆ. ಈ ಕಾರಣಕ್ಕೆ ಉದ್ಯೋಗ, ಶಿಕ್ಷಣ ಸಿಗದೆ ಆರ್ಥಿಕ ಅಸಮಾನತೆ ಹೆಚ್ಚಿ ಅಸಮಾನತೆ ಹೆಚ್ಚಾಯಿತು ಎಂದು ವಿವರಿಸಿದರು.

ಬಸವಾದಿ ಶರಣರು ಜಾತಿಮುಕ್ತ ಮನುಷ್ಯ ಸಮಾಜ ನಿರ್ಮಾಣಕ್ಕೆ ಹೋರಾಡಿದ್ದರು. ಒಟ್ಟಿಗೆ ಕುಳಿತು ಊಟ ಮಾಡಲಾಗದ ಅನಿಷ್ಠ ಪದ್ಧತಿ ವಿರುದ್ಧ ಧ್ವನಿ ಎತ್ತಿ ಜಾತಿ ಅಸಮಾನತೆ ಅಳಿಸಲು ಹೋರಾಡಿದ್ದನ್ನು ವಿವರಿಸಿದರು.

ಎಲ್ಲಾ ಜಾತಿ, ಸಮುದಾಯಗಳ ಜಾತ್ಯತೀತ ಪ್ರತಿನಿಧಿಗಳನ್ನೊಳಗೊಂಡ ಅನುಭವ ಮಂಟಪದ ಉದ್ದೇಶವೇ ಜಾತಿ ಮುಕ್ತ ಸಮಾಜದ ನಿರ್ಮಾಣವಾಗಿತ್ತು ಎಂದರು.

ಮಡಿವಾಳ ಸಮಾಜದಲ್ಲಿ ಯಾರೂ ಶಾಸಕರಿಲ್ಲ, ಒಬ್ಬರು ಮಾತ್ರ ಐಎಎಸ್ ಅಧಿಕಾರಿ ಇದ್ದಾರೆ. ಮಡಿವಾಳ ಸಮಾಜ ಇಷ್ಟು ಹಿಂದುಳಿಯಲು ಮನುಸ್ಮೃತಿ ಕಾರಣ. ಈ ಅಸಮಾನತೆ ಕಾರಣಕ್ಕೇ ಮನುಸ್ಮೃತಿಯನ್ನು ಅಂಬೇಡ್ಕರ್ ಅವರು ಬೆಂಕಿ ಹಾಕಿ ಸುಟ್ಟರು. ಈ ಮನುಸ್ಮೃತಿಯೇ ಜಾತಿ ವ್ಯವಸ್ಥೆಯ ಮೂಲ ಎಂದರು.

ಮಡಿವಾಳ ಸಮುದಾಯದ ಮಕ್ಕಳು ಹೆಚ್ಚೆಚ್ಚು ಶಿಕ್ಷಣ ಪಡೆಯಬೇಕು ಎನ್ನುವ ಉದ್ದೇಶದಿಂದಲೇ ನಾವು ವಿದ್ಯಾಸಿರಿ ಯೋಜನೆ ಜಾರಿಗೆ ತಂದೆವು. ಈಗ ವಿದ್ಯಾಸಿರಿ ಯೋಜನೆಯ ಮೊತ್ತವನ್ನು ಪ್ರತೀ ವಿದ್ಯಾರ್ಥಿಗೆ ಎರಡು ಸಾವಿರಕ್ಕೆ ಹೆಚ್ಚಿಸಲಾಗುವುದು, ಜೊತೆಗೆ ಮಡಿವಾಳ ಸಮುದಾಯದ ಹಾಸ್ಟೆಲ್ ಗೆ ಅಗತ್ಯ ಸವಲತ್ತು ಒದಗಿಸಲಾಗುವುದು ಎಂದರು.

ಸಮಾನತೆ ಸಾರುವ ಸಂವಿಧಾನವನ್ನು ವಿರೋಧಿಸುವವರನ್ನು ದೂರ ಇಡಿ. ಹತ್ತಿರ ಸೇರಿಸಬೇಡಿ. ಸಂವಿಧಾನ ವಿರೋಧಿಗಳ ಜೊತೆ ಕೈ ಜೋಡಿಸುವುದು ಮಡಿವಾಳ ಮಾಚಿದೇವರಿಗೆ ಮಾಡುವ ಅವಮಾನ ಎಂದರು.

# ಬಸವ ಜಯಂತಿಗೆ ಸಿದ್ಧತೆ ಕೈಗೊಳ್ಳಿ

**ಮೊದಲ ಪುಟದಿಂದ**

ಕಚೇರಿಗಳಲ್ಲಿ ಕಡ್ಡಾಯವಾಗಿ ಜಯಂತಿಯನ್ನು ಆಚರಣೆ ಮಾಡಬೇಕು ಎಂದರು.

ಮಹಾತ್ಮರ ವಿಚಾರಧಾರೆಗಳು, ಜೀವನ ಸಿದ್ಧಾಂತಗಳನ್ನು ಸಾರ್ವಜನಿಕರಿಗೆ ಪರಿಚಯಿಸುವ ಸಲುವಾಗಿ ಜಯಂತಿಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕಿದೆ. ಮಹಾತ್ಮರ ಜಯಂತಿಗಳನ್ನು ಒಂದು ಜಾತಿ, ಸಮುದಾಯಗಳಿಗೆ ಸೀಮಿತಗೊಳಿಸಬಾರದು, ಎಲ್ಲರೂ ಭಾಗಿಯಾಗಬೇಕು ಎಂದು ಅವರು ಸಭೆಯ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಕೆ.ಬಿ.ಬಡಿಗೇರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ದತ್ತಪ್ಪ ಸಾಗೂರು, ರಾಯಚೂರು ಮಹಾನಗರ ಪಾಲಿಕೆಯ ಸಮುದಾಯ ಸಂಘಟನಾ ಅಧಿಕಾರಿ ಕೃಷ್ಣ ಕಟ್ಟಿಮನಿ, ವಾರ್ತಾ ಇಲಾಖೆಯ ಗವಿಸಿದ್ದಪ್ಪ ಹೊಸಮನಿ, ಸಮಾಜದ ಮುಖಂಡರಾದ ಚಂದ್ರಶೇಖರ ಪಾಟೀಲ, ಪರಮೇಶ್ವರ, ಜಾಗತಿಕ ಲಿಂಗಾಯತ ಮಹಾಸಭಾ ಮತ್ತು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳು ಹಾಗು ಇನ್ನಿತರ ಸಮುದಾಯಗಳ ಸಂಘಟಕರು ಮತ್ತು ಗಣ್ಯರು ಇದ್ದರು.

**14 ಭಾಷೆಗಳಲ್ಲಿ ಸುದ್ದಿ**

ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಜಾನುವಾರುಗಳಿಗೆ ಕಾಲು ಬಾಯಿ ರೋಗ ಲಸಿಕೆ ಉಚಿತ

### ಸಚಿವ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಹೇಳಿಕೆ | ಏ.21 ರಿಂದ ಮೇ 4ರವರೆಗೆ ಲಸಿಕಾ ಕಾರ್ಯಕ್ರಮ

■ **ಹಂಪಿ ಟೈಮ್ಸ್ ರಾಯಚೂರು**

ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯಿಂದ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮ ದಡಿಯಲ್ಲಿ 7ನೇ ಸುತ್ತಿನ ಕಾಲು ಬಾಯಿ ರೋಗದ ಉಚಿತ ಸಾಮೂಹಿಕ ಲಸಿಕಾ ಹಾಗೂ ಚರ್ಮಗಂಟು ರೋಗದ ಲಸಿಕಾ ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಏಪ್ರಿಲ್ 21ರಿಂದ ಮೇ 04ರವರೆಗೆ ಹಮ್ಮಿಕೊಳ್ಳಲಾಗಿದ್ದು, ರೈತರು ಕಾರ್ಯಕ್ರಮಕ್ಕೆ ಸಹಕರಿಸುವಂತೆ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಹೇಳಿದರು.



ಇತ್ತೀಚೆಗೆ ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ರಾಷ್ಟ್ರೀಯ ಜಾನುವಾರು ರೋಗ ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ 7ನೇ ಸುತ್ತಿನ ಕಾಲು ಬಾಯಿ ರೋಗದ ಉಚಿತ ಸಾಮೂಹಿಕ ಲಸಿಕಾ ಹಾಗೂ ಚರ್ಮಗಂಟು ರೋಗದ ಲಸಿಕಾ ಕಾರ್ಯಕ್ರಮದ ಪೋಸ್ಟರ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕಾರ್ಯಕ್ರಮದಡಿ ಇಲಾಖಾ ಸಿಬ್ಬಂದಿ ತಮ್ಮ ಹಳ್ಳಿಗೆ ಲಸಿಕೆ ಹಾಕಲು ಬಂದಾಗ ಎಲ್ಲಾ ರೈತ ಬಾಂಧವರು ತಮ್ಮಲ್ಲಿರುವ ಎಲ್ಲಾ ದನ ಮತ್ತು ಎಮ್ಮೆ ಮತ್ತು 3 ತಿಂಗಳ ಮೇಲ್ಪಟ್ಟ ಕರುಗಳಿಗೆ ಲಸಿಕೆ ಹಾಕಿಸಿ ಸಾಂಕ್ರಾಮಿಕ ರೋಗದಿಂದಾಗುವ ಆರ್ಥಿಕ ನಷ್ಟವನ್ನು ತಪ್ಪಿಸಬೇಕು ಎಂದರು.

ಇದೇ ಸಂದರ್ಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಪಂ ಸಿಇಒ ರಾಹುಲ್ ತುಕಾರಾಂ ಪಾಂಡ್ವೆ, ಎಸ್ಪಿ ಪುಟ್ಟಮಾದಯ್ಯ ಎಂ, ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ, ಇತರರಿದ್ದರು.

# ಸಣ್ಣ ನೀರಾವರಿಯ ಎಲ್ಲಾ ಗುತ್ತಿಗೆದಾರರಿಗೆ ಹಣ ಬಿಡುಗಡೆ

**ಮೂರನೇ ಪುಟದಿಂದ**

ಹೆಚ್ಚಾಗಿರುವಂತಹ ಲೆಕ್ಕಶೀರ್ಷಿಕೆಗಳಿಗೆ ಹೆಚ್ಚುವರಿಯಾಗಿ ಲಭ್ಯವಾದ ಹಣದಲ್ಲಿ ಶೇಕಡಾ 55 ಕ್ಕೂ ಹೆಚ್ಚು ಭಾಗವನ್ನು ಮೀಸಲಿಡಲಾಗಿದೆ.

ಅಲ್ಲದೇ, ಎಂಓಟಿ (ಕೆರೆಗಳ ಆಧುನೀಕರಣ) ಲೆಕ್ಕಶೀರ್ಷಿಕೆಯಲ್ಲಿ ಇರುವ ಎಲ್ಲಾ ಕಾಮಗಾರಿಗಳ/ಗುತ್ತಿಗೆದಾರರಿಗೆ ಡಿಸೆಂಬರ್ ಮತ್ತು ಮಾರ್ಚ್ ತಿಂಗಳಲ್ಲಿ ಒಟ್ಟಾರೆಯಾಗಿ ಶೇಕಡಾ 25 ರಷ್ಟು, ಏಪಿಬಿ, ಅಣೆಕಟ್ಟು ಪಿಕಪ್ ಲೆಕ್ಕಶೀರ್ಷಿಕೆಯಲ್ಲಿ ಇರುವ ಎಲ್ಲಾ ಕಾಮಗಾರಿಗಳ/ಗುತ್ತಿಗೆದಾರರಿಗೆ ಡಿಸೇಂಬರ್ ಮತ್ತು ಮಾರ್ಚ್ ತಿಂಗಳಲ್ಲಿ ಶೇಡಕಾ 31 ರಷ್ಟು, ಎಸ್ಸಿಪಿ, ಟಿಎಸ್ಪಿ ಹಾಗೂ ನಬಾರ್ಡ್ ಯೋಜನೆಅಡಿಯಲ್ಲಿಕೈಗೊಳ್ಳಲಾಗಿರುವಂತಹ ಕಾಮಗಾರಿಗಳ ಬಾಕಿ ಬಿಲ್ಲಿನ ಶೇಕಡಾ 100 ರಷ್ಟು ಹಣವನ್ನು ನೀಡಲಾಗಿದೆ.

ನಮ್ಮ ಇಲಾಖೆಯಲ್ಲಿ ಕಾಮಗಾರಿ ಕೈಗೊಳ್ಳಲಾಗುತ್ತಿರುವಂತಹ ಎಲ್ಲಾ ಅಂದರೆ ಶೇಕಡಾ 100 ರಷ್ಟು ಕಾಮಗಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಲಾಗಿದೆ. ಯಾವುದೇ ಒಬ್ಬ ಗುತ್ತಿಗೆದಾರರು/ಕಾಮಗಾರಿಗೆ ಹಣ ಬಿಡುಗಡೆ ಆಗಿಲ್ಲ ಎನ್ನುವುದನ್ನ ತೋರಿಸಲಿ ಎಂದು ಸಚಿವರು ಸವಾಲ್ ಹಾಕಿದರು.

ನಮ್ಮ ಇಲಾಖೆಯಲ್ಲಿ ಹಸ್ತಕ್ಷೇಪದ ಸಾಧ್ಯತೆಯೇ ಇಲ್ಲ. ಕಾಮಗಾರಿಗಳು ಸಕಾಲದಲ್ಲಿ ಮುಗಿಯಬೇಕು ಹಾಗೂ ಗುತ್ತಿಗೆದಾರರು ಗುಣಮಟ್ಟದಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು ಎನ್ನುವ ಉದ್ದೇಶದಿಂದ ನಾವು ಅನುದಾನದ ಲಭ್ಯತೆಯನ್ನು ನೋಡಿಕೊಂಡು ಹಣ ಬಿಡುಗಡೆ ಮಾಡುತ್ತಿದ್ದೇವೆ.

ಬಾಕಿ ಇರುವ ಎಲ್ಲಾ ಗುತ್ತಿಗೆದಾರರಿಗೂ ಹಣ ಬಿಡುಗಡೆ ಮಾಡಿರುವ ಹಿನ್ನಲೆಯಲ್ಲಿ ಜೇಷ್ಠತೆಯ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಜೇಷ್ಠತೆಯ ಆಧಾರದಲ್ಲಿ ಹಣ ಬಿಡುಗಡೆ ಮಾಡಿದ್ದಲ್ಲಿ ಇದುವರೆಗೂ ಲಭ್ಯವಾದಂತಹ ಹಣಕಾಸಿನ ಲಭ್ಯತೆಯಲ್ಲಿ ಕೇವಲ ಕೆಲವೇ ಗುತ್ತಿಗೆದಾರರು/ಕಾಮಗಾರಿಗೆ ಮಾತ್ರ ಹಣ ನೀಡಲು ಸಾಧ್ಯವಾಗುತ್ತಿತ್ತು. ಯಾವುದೇ ತಾರತಮ್ಯ ವಿಲ್ಲದೇ ಪಾರದರ್ಶಕತೆಯಿಂದ, ನಮ್ಮನ್ನು ಭೇಟಿಯಾದ ಹಾಗೂ ಭೇಟಿಯಾಗದೇ ಇರುವಂತಹ ಎಲ್ಲಾ ಗುತ್ತಿಗೆದಾರರಿಗೂ ಸಮಾನವಾಗಿ ಹಣ ಬಿಡುಗಡೆ ಆಗಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಮಾಡಿರುವಂತಹ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಅಂತಹ ಘಟನೆಗಳು ಇದ್ದಲ್ಲಿ ಸಕ್ಷಮ ಪ್ರಾಧಿಕಾರದಲ್ಲಿ ದೂರು ಸಲ್ಲಿಸುವಂತೆಯೂ ತಿಳಿಸಲಾಗಿದೆ ಎಂದರು.

ನಿನ್ನೆ ನಡೆದ ಸಭೆಯಲ್ಲಿ ಗುತ್ತಿಗೆದಾರರ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಲ್ಲಿ ಇದ್ದಂತಹ ಎಲ್ಲಾ ಗೊಂದಲಗಳನ್ನು ನಿವಾರಿಸಲಾಗಿದೆ. ಜೇಷ್ಠತೆ ಆಧಾರದಲ್ಲಿ ಬಾಕಿ ಇರುವಂತಹ ಎಲ್ಲಾ ಬಿಲ್ ಗಳನ್ನು ಪಾವತಿಸುವಂತೆ ಸಂಘದ ಪದಾಧಿಕಾರಿಗಳು ಮನವಿ ಮಾಡಿಕೊಂಡರು. ಈ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಟೆಂಡರ್ ಪ್ರಕ್ರಿಯೆಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮನವಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವ ಭರವಸೆಯನ್ನು ನೀಡಲಾಗಿದೆ.

ನನ್ನ ಇಲಾಖೆಯಲ್ಲಿ ಯಾರದ್ದೂ ಹಸ್ತಕ್ಷೇಪ ಇಲ್ಲ, ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರ ಹಿತರಕ್ಷಣೆಯ ಜೊತೆಯಲ್ಲಿಯೇ ಕಾಮಗಾರಿಗಳು ಸುಗಮವಾಗಿ ಮುಂದುವರೆ ಯುಂತಹ ಕ್ರಮಗಳನ್ನು ಅಳವಡಿಸಿ ಕೊಂಡಿದ್ದೇವೆ. ಇದರ ಬಗ್ಗೆ ನಿನ್ನೆ ನಡೆದ ಸಭೆಯಲ್ಲಿ ಗುತ್ತಿಗೆದಾರರು ಈ ಸಣ್ಣ ನೀರಾವರಿ ಇಲಾಖೆಯಲ್ಲಿ ಹಣಕಾಸಿನ ಬಿಡುಗಡೆಯ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಸಹಮತಿ ವ್ಯಕ್ತಪಡಿಸಿದ್ದಾರೆ. ಮಾಹಿತಿ ಇಲ್ಲದೇ ಅನಗತ್ಯ ಹೇಳಿಕೆ ನೀಡುವ ಮೂಲಕ ಗೊಂದಲ ಉಂಟುಮಾಡುವುದನ್ನು ಕೈಬಿಡುವಂತೆಯೂ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಾದ ರಾಘವನ್ ಉಪಸ್ಥಿತರಿದ್ದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನಪತ್ರಿಕೆ
HAMPI TIMES

BOOK YOUR ADVERTISEMENTS
TO REACH MORE AUIDIENCE

**Classified Advertisements**
Examples: Job postings, Real estate listings , Matrimonial ads, Lost and found, Services (e.g., tutors, plumbers)

**Display Advertisements**
Examples: Brand promotions, Product launches, Corporate announcements

**Public Notices and Announcements**
Examples: Tender notices, Government announcements, Legal notices, Obituaries

**Recruitment Advertisements**
Examples: Company job openings, Walk-in interviews, Recruitment drives

**Health and Wellness Advertisements**
Examples: Hospitals or clinics, Medical equipment, Health supplements

**Educational Advertisements**
Examples: College admissions, Coaching center promotions, Training programs

**Event Advertisements**
Examples: Cultural programs, Exhibitions, Concerts or festivals

**Retail Advertisements**
Examples: Sales or discounts, New store openings

**Entertainment Advertisements**
Examples: Movie releases, TV show promotions, Theater events

**Political Advertisements**
Campaigns or announcements related to political parties or candidates.

**Real Estate Advertisements**
Ads for buying, selling, or renting property.

**Matrimonial Advertisements**
Personal ads for seeking marriage alliances.
Examples: Bride or groom profiles, Community-specific ads

**Product Advertisements**
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com